ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 8, 2021

ಸಂಪುಟ : 48 ಸಂಚಿಕೆ : 25 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

# ಪೆಟ್ರೋಲ್ ಸೆಂಚ್ಯುರಿ, ಬೆಲೆ ಏರಿಕೆಯ ಉರಿ

ದಾವಣಗೆರೆ, ಜೂ. 6 - ಕೊರೊನಾ ಕಾಲದಲ್ಲಿ ಪೆಟ್ರೋಲ್ ಬೆಲೆ ಶತಕ ಭಾರಿಸಿದೆ. ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ಪೆಟ್ರೋಲ್ ಮಾರಾಟ ದರ ಲೀಟರ್‌ಗೆ 100.17 ರೂ.ಗಳಿಗೆ ತಲುಪಿದೆ. ಡೀಸೆಲ್ ದರ 92.83 ರೂ.ಗಳಿಗೆ ತಲುಪಿದೆ.

ತೈಲ ದರವಷ್ಟೇ ಅಲ್ಲದೇ ಎಣ್ಣೆ, ಮೊಟ್ಟೆ, ಬೇಳೆಯಂತಹ ಆಹಾರ ವಸ್ತುಗಳು, ಕಬ್ಬಿಣ - ಸಿಮೆಂಟ್ ಮುಂತಾದ ಉತ್ಪಾದನಾ ಸರಕುಗಳು, ಪೇಪರ್, ಜವಳಿ, ಲೋಹ... ಹೀಗೆ ಹತ್ತು ಹಲವು ವಸ್ತುಗಳ ಬೆಲೆಗಳು ಏರುಮುಖವಾಗಿವೆ.

ಕೊರೊನಾದ ಮೊದಲ ಅಲೆಯ ವೇಳೆಗೆ ತೈಲ ಬೆಲೆ ಇಳಿಮುಖವಾಗಿತ್ತು. ಆದರೆ, ಎರಡನೇ ಅಲೆ ವೇಳೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆ ಕಾಣುತ್ತಿದೆ. ಜೊತೆಗೆ ಕೇಂದ್ರ ಸರ್ಕಾರ ಹೇರಿದ ತೆರಿಗೆಯೂ ಸೇರಿಕೊಂಡಿದೆ. ಡೀಸೆಲ್ ಬೆಲೆ ಏರಿಕೆ ಹಲವಾರು ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತಿದೆ.

ಕೊರೊನಾ ನಿರ್ಬಂಧಗಳ ಕಾರಣದಿಂದಾಗಿ ಉತ್ಪಾದಕರಿಂದ ಹಿಡಿದು ಗ್ರಾಹಕರೆಲ್ಲರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದೆಡೆ ಕೊರೊನಾ ಲಾಕ್‌ಡೌನ್ ಕಾರಣದಿಂದಾಗಿ ಆದಾಯ ಕುಸಿದಿದ್ದರೆ, ಬೆಲೆ ಏರಿಕೆ ಗಾಯದ ಮೇಲೆ ಬರೆ ಹಾಕುತ್ತಿದೆ.

ಸಿಎಂಐಇ ವರದಿಯ ಪ್ರಕಾರ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ.97ರಷ್ಟು ಜನರು ಯಾವುದೇ ಆದಾಯ ಏರಿಕೆ ಕಂಡಿಲ್ಲ. ಕಳೆದ ವರ್ಷ ಕೊರೊನಾ ಸಮಯದಲ್ಲಿ ಕುಸಿದ ಆದಾಯ ಇನ್ನೂ ಏರುಮುಖವಾಗಿಲ್ಲ. ಇದು ಜನರ ಖರೀದಿ ಸಾಮರ್ಥ್ಯ ಕುಸಿಯುವಂತೆ ಮಾಡಿದೆ.

ರಿಸರ್ವ್ ಬ್ಯಾಂಕ್‌ನ ಗ್ರಾಹಕರ ವಿಶ್ವಾಸ ಸೂಚ್ಯಂಕದ ಪ್ರಕಾರ, ದೇಶದಲ್ಲಿ ಜನರ ವಿಶ್ವಾಸ ಕುಸಿಯುತ್ತಿದೆ. ಜಗತ್ತಿನ ಅತಿ ದೊಡ್ಡ ಕೊರೊನಾ ವೈರಸ್ ಅಲೆ ಅಪ್ಪಳಿಸಿದ ನಂತರ, ಮಾರ್ಚ್ ತಿಂಗಳಲ್ಲಿ ಶೇ.53.1ರಷ್ಟಿದ್ದ ಗ್ರಾಹಕರ ವಿಶ್ವಾಸ, ಈಗ ಶೇ.48.5ಕ್ಕೆ ಕುಸಿದಿದೆ.

ಉದ್ಯೋಗ ಹಾಗೂ ಆರ್ಥಿಕ ಪರಿಸ್ಥಿತಿಯ ಬಗ್ಗೆ ಜನರಿಗೆ ಕಳವಳ ಇದೆ. ಹೀಗಾಗಿ ದಿನ ಬಳಕೆ ಹೊರತಾದ ವಸ್ತುಗಳ ಬೇಡಿಕೆ ಈ ಹಿಂದೆಯೇ ಕಡಿಮೆಯಾಗಿತ್ತು. ಈಗ (2ನೇ ಪುಟಕ್ಕೆ)




## ಡೀಸೆಲ್ ಸಹ ಶತಕದತ್ತ

ನವದೆಹಲಿ, ಜೂ. 7 – ಹಲವು ರಾಜ್ಯಗಳಲ್ಲಿ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದ ಬೆನ್ನಲ್ಲೇ, ಡೀಸೆಲ್ ಬೆಲೆ ಸಹ ಶತಕ ಭಾರಿಸುವತ್ತ ಸಾಗಿದೆ. ರಾಜಸ್ಥಾನದಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ 100 ರೂ.ಗಳ ಹತ್ತಿರ ಬಂದಿದೆ.

ಸೋಮವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 28 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 27 ಪೈಸೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ.

ಮೇ 4ರ ನಂತರ 21 ಬಾರಿ ತೈಲ ಬೆಲೆ ಹೆಚ್ಚಿಸಲಾಗಿದೆ. ದೇಶಾದ್ಯಂತ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ದಾಖಲೆ ಹಂತದಲ್ಲಿ ಮುಂದುವರೆದಿದೆ.ಈಗ ರಾಜಸ್ಥಾನದ ಶ್ರೀ ಗಂಗಾನಗರ ಜಿಲ್ಲೆಯಲ್ಲಿ (2ನೇ ಪುಟಕ್ಕೆ)

## ಕಚ್ಚಾ ತೈಲ ಕಾರಣದಿಂದ ಪೆಟ್ರೋಲ್ ಬೆಲೆ ಏರಿಕೆ

ಅಹಮದಾಬಾದ್, ಜೂ. 7 – ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿರುವುದರಿಂದ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಾಗುತ್ತಿದೆ ಎಂದು ಕೇಂದ್ರ, ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ಕಚ್ಚಾ ತೈಲದ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರಲ್‌ಗೆ 70 ಡಾಲರ್‌ಗಳಿಗೂ ಹೆಚ್ಚಾಗಿದೆ. ಇದೇ ತೈಲ ಬೆಲೆ ಏರಿಕೆಗೆ ಕಾರಣ. ಭಾರತಕ್ಕೆ ಅಗತ್ಯವಾಗಿರುವ ತೈಲದ ಶೇ.80 ರಷ್ಟು ವಿದೇಶದಿಂದ ಬರುತ್ತಿದೆ ಎಂದವರು ಹೇಳಿದ್ದಾರೆ.



# ಅನ್‌ಲಾಕ್‌ನಲ್ಲಿ ಮುಗಿಬಿದ್ದ ಜನತೆ

## ಅವಕಾಶದ ಸಮಯದಲ್ಲಿ ನಿಯಮಗಳು ಕಣ್ಮರೆ

ದಾವಣಗೆರೆ, ಜೂ.7- ಅಗತ್ಯ ವಸ್ತುಗಳ ಖರೀದಿಗೆ ನೀಡಿರುವ ಅವಕಾಶದ ಸಮಯದಲ್ಲಿ ಹೆಚ್ಚಾಗಿ ಕೊರೊನಾ ಮುಂಜಾಗ್ರತಾ ನಿಯಮಗಳನ್ನು ಪಾಲಿಸದೇ, ಉಲ್ಲಂಘಿಸುವುದು ನಗರದಲ್ಲಿ ಕಂಡುಬರುತ್ತಿದೆ. ಇದಕ್ಕೆ ಇಂದು ಬೆಳಿಗ್ಗೆ ಆಗುತ್ತಿದ್ದಂತೆ ಅಗತ್ಯ ವಸ್ತುಗಳ ಖರೀದಿಗೆ ಜನರು ಮುಗಿಬಿದ್ದಿದ್ದೇ ಸಾಕ್ಷಿಯಾಗಿತ್ತು.

ಕೊರೊನಾ ನಿಯಂತ್ರಣಕ್ಕೆ ತರಲು ಜಿಲ್ಲಾಡಳಿತ 14ರವರೆಗೆ ಕಂಪ್ಲೀಟ್ ಲಾಕ್‌ಡೌನ್ ಜಾರಿಗೆ ತಂದಿದ್ದು, ಅಗತ್ಯ ವಸ್ತುಗಳ ಖರೀದಿಗೆ ಇಂದು, 9 ಹಾಗೂ 11ರಂದು ಬೆಳಗ್ಗೆ 6 ರಿಂದ 12ರವರೆಗೆ ಮಾತ್ರ ಕಾಲಾವಕಾಶ ನೀಡಿದೆ. ಈ ಸಮಯದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿನ ದಿನಸಿ ಅಂಗಡಿಗಳು, ತರಕಾರಿ, ಸೊಪ್ಪು, ಚಿಕನ್, ಮಟನ್, ಮೀನು, ಮೊಟ್ಟೆ ಸೇರಿದಂತೆ, ಅಗತ್ಯ ವಸ್ತುಗಳನ್ನು ಖರೀದಿಸಲು ನಾ ಮುಂದು, ತಾ ಮುಂದು ಎನ್ನುವಂತೆ ನಿಂತಿದ್ದರು. ದಿನಸಿ ಅಂಗಡಿಗಳು ಸೇರಿದಂತೆ ಸೂಪರ್ ಮಾರ್ಕೆಟ್, ಪ್ರಾವಿಜನ್ ಸ್ಟೋರ್‌ಗಳ ಮುಂದೆ ಜನರು ಗುಂಪು ಗುಂಪಾಗಿ ನಿಂತಿದ್ದರು.

ಇನ್ನು ಅಂಗಡಿಯವರೂ ಸಹ ತಮ್ಮ ವ್ಯಾಪಾರ ಕೇಂದ್ರಗಳ ಮುಂದೆ ನಿಂತಿದ್ದ ಗ್ರಾಹಕರಿಗೆ ಮಾಸ್ಕ್ ಹಾಕಿಕೊಳ್ಳುವಂತೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಹೇಳದೇ ಕೊರೊನಾ ರೋಗದ ಭಯವೇ ಇಲ್ಲದೇ ತಮ್ಮ ಪಾಡಿಗೆ ತಾವು ವ್ಯಾಪಾರ ಮಾಡುವಲ್ಲಿ ನಿರತರಾಗಿದ್ದರು. ಯಾವುದೇ ಕಡೆಗಳಲ್ಲೂ ಸಾಮಾಜಿಕ ಅಂತರ, ಸೋಂಕು ನಿವಾರಕ (2ನೇ ಪುಟಕ್ಕೆ)

# ರಾಜ್ಯಗಳಿಗೆ ಮತ್ತೆ ಉಚಿತ ಲಸಿಕೆ

## ಖಾಸಗಿ ಆಸ್ಪತ್ರೆಗಳ ಸೇವಾ ಶುಲ್ಕ 150 ರೂ.ಗೆ ನಿಗದಿ : ಪ್ರಧಾನಿ


ನವದೆಹಲಿ ಜೂ. 7 – ಬರುವ ಜೂನ್ 21ರಿಂದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಉಚಿತವಾಗಿ ಕೊರೊನಾ ಲಸಿಕೆ ಒದಗಿಸಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಇದುವರೆಗೂ ಲಸಿಕೆ ಉತ್ಪಾದಕರಿಂದ ಕೇಂದ್ರ ಸರ್ಕಾರ ಶೇ.50ರಷ್ಟು ಲಸಿಕೆಗಳನ್ನು ಪಡೆಯುತ್ತಿತ್ತು. ಈಗ ರಾಜ್ಯಗಳ ಪಾಲಾದ ಶೇ.25ರಷ್ಟನ್ನು ಕೇಂದ್ರ ಸರ್ಕಾರವೇ ಖರೀದಿಸಿ ರಾಜ್ಯಗಳಿಗೆ ಉಚಿತವಾಗಿ ನೀಡಲು ತೀರ್ಮಾನಿಸಿದೆ.

ದೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಈ ವಿಷಯ ತಿಳಿಸಿರುವ ಪ್ರಧಾನಿ ಮೋದಿ, ಖಾಸಗಿ ವಲಯದ ಆಸ್ಪತ್ರೆಗಳು ಶೇ.25ರಷ್ಟು ಲಸಿಕೆ ಖರೀದಿಸಬಹುದು. ಆದರೆ, ಪ್ರತಿ ಡೋಸ್ ಲಸಿಕೆಗೆ 150 ರೂ.ಗಳ ಸೇವಾ ಶುಲ್ಕ ಮಾತ್ರ ಪಡೆಯಬೇಕು ಎಂದು ನಿರ್ಬಂಧ ಹೇರಲಾಗಿದೆ.

ಕೇಂದ್ರ ಸರ್ಕಾರ ಇದುವರೆಗೂ 45 ವರ್ಷ ಮೀರಿದವರಿಗೆ ತನ್ನ ಕೋಟಾದಡಿ ಉಚಿತವಾಗಿ ಲಸಿಕೆ ನೀಡುತ್ತಿತ್ತು. ರಾಜ್ಯಗಳ ಕೋಟಾದಲ್ಲಿ 18 ವರ್ಷ ಮೀರಿದವರಿಗೆ ಲಸಿಕೆ ನೀಡಲಾಗುತ್ತಿತ್ತು. ಈಗ 18 ವರ್ಷ ಮೀರಿದ ಎಲ್ಲರೂ ಕೇಂದ್ರ ಸರ್ಕಾರದಿಂದ ಉಚಿತ ಲಸಿಕೆ ಪಡೆಯಲಿದ್ದಾರೆ.

ಅಲ್ಲದೇ, ಖಾಸಗಿ ಆಸ್ಪತ್ರೆಗಳು ನೇರವಾಗಿ ಲಸಿಕಾ ಕಂಪನಿಗಳಿಂದ ಲಸಿಕೆ ಖರೀದಿಸಿ ಜನರಿಗೆ ನೀಡುತ್ತಿವೆ. ಇದಕ್ಕಾಗಿ ಜನರು ಲಸಿಕೆ ದರದ ಜೊತೆಗೆ ಖಾಸಗಿ ಸೇವಾ ಶುಲ್ಕವನ್ನೂ



ಪಾವತಿಸಬೇಕಿದೆ.

ಸುಪ್ರೀಂ ಕೋರ್ಟ್ ಇತ್ತೀಚೆಗೆ ಕೇಂದ್ರ ಸರ್ಕಾರದ ಲಸಿಕಾ ನೀತಿಯನ್ನು ತರಾಟೆಗೆ ತೆಗೆದುಕೊಂಡಿತ್ತು. ರಾಜ್ಯಗಳು ಪ್ರತ್ಯೇಕವಾಗಿ ಲಸಿಕೆ ಖರೀದಿಸಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿತ್ತು. ಅದರ ಬೆನ್ನಲ್ಲೇ ಪ್ರಧಾನಿ ಹೊಸ ಲಸಿಕಾ ನೀತಿ ಪ್ರಕಟಿಸಿದ್ದಾರೆ.

ವೈರಸ್ ವಿರುದ್ಧ ಲಸಿಕೆ ಗುರಾಣಿ ಇದ್ದಂತೆ ಎಂದು ಹೇಳಿರುವ ಪ್ರಧಾನಿ, ಮುಂಬರುವ ದಿನಗಳಲ್ಲಿ ದೇಶದಲ್ಲಿ ಲಸಿಕೆ ಪೂರೈಕೆ ಗಣನೀಯವಾಗಿ ಹೆಚ್ಚಾಗಲಿದೆ ಎಂದು ತಿಳಿಸಿದ್ದಾರೆ.

ಬೇರೆ ದೇಶಗಳ ಕಂಪನಿಗಳಿಂದಲೂ ಲಸಿಕೆ ಪಡೆಯುವ ಪ್ರಕ್ರಿಯೆ ಚುರುಕುಗೊಳಿಸಲಾಗುತ್ತಿದೆ ಎಂದು ಮೋದಿ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಕೊರೊನಾದಿಂದ ಮಕ್ಕಳ ಮೇಲೆ ಪರಿಣಾಮವಾಗುವ ಬಗ್ಗೆ ಕೆಲ ಪೋಷಕರು ಕಳವಳ ವ್ಯಕ್ತಪಡಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಈ ದಿಸೆಯಲ್ಲಿ ಎರಡು ಲಸಿಕೆಗಳನ್ನು ಮಕ್ಕಳ ಮೇಲೆ (2ನೇ ಪುಟಕ್ಕೆ)

## ರಾಜ್ಯಗಳಿಗೆ ಲಸಿಕಾ ಕಷ್ಟ ಗೊತ್ತಾಗಿದೆ

ಈ ಹಿಂದೆ ಪ್ರತಿಪಕ್ಷದ ಆಡಳಿತ ಇರುವ ರಾಜ್ಯಗಳು ಲಸಿಕೆಯನ್ನು ವಿಕೇಂದ್ರೀಕರಣಗೊಳಿಸುವಂತೆ ಒತ್ತಾಯಿಸಿದ್ದನ್ನು ಪ್ರಸ್ತಾಪಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ರಾಜ್ಯಗಳಿಗೆ ಈಗ ಲಸಿಕೆಯ ಕಷ್ಟ ಗೊತ್ತಾಗಿದೆ ಎಂದಿದ್ದಾರೆ.

ಲಸಿಕೆ ವಿಕೇಂದ್ರೀಕರಣ, ಲಸಿಕೆಯ ವಯೋಮಾನ ಸೇರಿದಂತೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರದ ಮೇಲೆ ಒತ್ತಡ ಹೇರಲಾಗಿತ್ತು. ಮಾಧ್ಯಮದ ಒಂದು ವರ್ಗ ಇದನ್ನು ಅಭಿಯಾನದಂತೆ ನಡೆಸಿತ್ತು ಎಂದು ಪ್ರಧಾನಿ ತಿಳಿಸಿದ್ದಾರೆ.

ಸಾಕಷ್ಟು ಚರ್ಚೆಯ ನಂತರ ಶೇ.25ರಷ್ಟು ಲಸಿಕೆಯನ್ನು ರಾಜ್ಯಗಳಿಗೆ ನೀಡಲು ಮೇ 1ರಿಂದ ತೀರ್ಮಾನಿಸಲಾಯಿತು. ಆದರೆ, (2ನೇ ಪುಟಕ್ಕೆ)

## ದೀಪಾವಳಿವರೆಗೆ ಉಚಿತ ಧಾನ್ಯ

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು ದೀಪಾವಳಿವರೆಗೆ ವಿಸ್ತರಿಸುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಕೊರೊನಾದ ಈ ಸಂದರ್ಭದಲ್ಲಿ ಸರ್ಕಾರ ಎಲ್ಲ ಬಡವರ ಪರವಾಗಿ ನಿಂತಿದೆ ಎಂದು ಪ್ರಧಾನಿ ತಿಳಿಸಿದ್ದಾರೆ. ಇದರಿಂದಾಗಿ ನವೆಂಬರ್‌ವರೆಗೆ ದೇಶದ 80 ಕೋಟಿ ಜನರು ಪ್ರತಿ ತಿಂಗಳು ಉಚಿತವಾಗಿ ಆಹಾರ ಧಾನ್ಯ ಪಡೆಯಲಿದ್ದಾರೆ.

ಈ ಯೋಜನೆಯ ಅನ್ವಯ ಪ್ರತಿ ವ್ಯಕ್ತಿಗೆ 5 ಕೆಜಿ ಉಚಿತ ಆಹಾರ ಧಾನ್ಯ ನೀಡಲಾಗುತ್ತದೆ. ಇದು ಪ್ರಸಕ್ತ ಪಡಿತರ ಮೂಲಕ ನೀಡಲಾಗುತ್ತಿರುವ ಆಹಾರ ಧಾನ್ಯಕ್ಕೆ ಹೆಚ್ಚುವರಿಯಾಗಿದೆ.

## ಉಪ ನೋಂದಣಾಧಿಕಾರಿ ಕಚೇರಿಗೆ ಮತ್ತೆ ಚಾಲನೆ

ಬೆಂಗಳೂರು, ಜೂ. 7- ಕೊರೊನಾ ಹಿನ್ನೆಲೆಯಲ್ಲಿ ಬಂದ್ ಮಾಡಲಾಗಿದ್ದ ಉಪ ನೋಂದಣಾಧಿಕಾರಿ ಕಚೇರಿಗಳು ಮತ್ತೆ ಕಾರ್ಯ ನಿರ್ವಹಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಕೊರೊನಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಕಚೇರಿಗಳು ಕಾರ್ಯನಿರ್ವಹಿಸಬೇಕು ಎಂದು ರಾಜ್ಯ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

## ಲಸಿಕೆಗಾಗಿ ಯುಡಿಐಡಿ ಕಾರ್ಡ್‌ಗೆ ಅನುಮತಿ

ನವದೆಹಲಿ ಜೂ. 7 – ಕೊರೊನಾ ಲಸಿಕೆ ಪಡೆಯಲು ನೀಡುವ ದಾಖಲೆಗಳಲ್ಲಿ ಕೇಂದ್ರ ಸರ್ಕಾರ ವಿಕಲಚೇತನರ ಗುರುತಿನ ಚೀಟಿಯಾದ ಯು.ಡಿ.ಐ.ಡಿ.ಯನ್ನು ಸೇರ್ಪಡೆ ಮಾಡಿದೆ. ಶೀಘ್ರದಲ್ಲೇ ಕೊವಿನ್ ವೆಬ್ ತಾಣದಲ್ಲಿ ಇದಕ್ಕಾಗಿ ವ್ಯವಸ್ಥೆ ಕಲ್ಪಿಸಲಾಗುವುದು.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವಾಲಯ, ಯು.ಡಿ.ಐ.ಡಿ ಕಾರ್ಡ್‌ಗಳನ್ನು ಗುರುತಿನ ಚೀಟಿಯಾಗಿ ಬಳಸುವ ಬಗ್ಗೆ ರಾಜ್ಯಗಳು ವ್ಯಾಪಕ ಪ್ರಚಾರ ಮಾಡಬೇಕು ಎಂದು ಹೇಳಿದೆ.

## 61 ದಿನಗಳಲ್ಲೇ ಕಡಿಮೆ ಕೊರೊನಾ ಸೋಂಕು

ನವದೆಹಲಿ, ಜೂ. 7 – ದೇಶದಲ್ಲಿ ಸೋಮವಾರ 1 ಲಕ್ಷದಷ್ಟು ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 2,427 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಾವುಗಳ ಪ್ರಮಾಣ ಕಳೆದ 45 ದಿನಗಳಲ್ಲೇ ಅತಿ ಕಡಿಮೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಸೋಂಕು ಸಹ ಕಳೆದ 61 ದಿನಗಳಲ್ಲಿ ಅತಿ ಕಡಿಮೆಯಾಗಿದೆ. ಈ ಹಿಂದೆ ಏಪ್ರಿಲ್ 6 ರಂದು ದೇಶದಲ್ಲಿ 96,982 (2ನೇ ಪುಟಕ್ಕೆ)

# ಸಹಿ ಸಂಗ್ರಹಕ್ಕೆ ಬಿಎಸ್‌ವೈ ಬ್ರೇಕ್

## ಭಿನ್ನಮತ ತಡೆಗಾಗಿ ಸಿಎಂ, ಬಿಜೆಪಿ ರಾಜ್ಯಾಧ್ಯಕ್ಷ ಒಳಗೊಂಡ ಸಮಿತಿ ರಚನೆ

ಬೆಂಗಳೂರು, ಜೂ 7 – ತಮ್ಮನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸಲಾಗುತ್ತಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಸಹಿ ಸಂಗ್ರಹ ಕಾರ್ಯದಲ್ಲಿ ತೊಡಗದಂತೆ ಆಡಳಿತಾರೂಢ ಬಿಜೆಪಿ ಶಾಸಕರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚನೆ ನೀಡಿದ್ದಾರೆ.



**ಶಾಸಕರು ಕೊರೊನಾ ತಡೆಗಾಗಿ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಸಿಎಂ ಸೂಚನೆ**

ಕೊರೊನಾ ಪಿಡುಗಿನ ಕಾರಣದಿಂದಾಗಿ ಜನರು ಸಂಕಷ್ಟ ಎದುರಿಸುತ್ತಿರುವಾಗ ಪ್ರತಿಯೊಬ್ಬ ಬಿಜೆಪಿ ಶಾಸಕ, ತಮ್ಮ ಕ್ಷೇತ್ರದಲ್ಲಿ ಕೊರೊನಾ ನಿಯಂತ್ರಣಕ್ಕಾಗಿ ಕೆಲಸ ಮಾಡಬೇಕು. ಅವರು ಯಾವುದೇ ರೀತಿಯ ಸಹಿ ಅಭಿಯಾನ ಇಲ್ಲವೇ ರಾಜಕೀಯ ಹೇಳಿಕೆ ನೀಡಬಾರದು. ಸಂಕಷ್ಟದಲ್ಲಿ ಜನರಿಗೆ ನೆರವಾಗಬೇಕು ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

ಯಡಿಯೂರಪ್ಪ ಬದಲಾವಣೆಯಾಗ ಲಿದೆ ಎಂಬ ಊಹಾಪೋಹಗಳ ಹಿನ್ನೆಲೆಯಲ್ಲಿ ಹಲವಾರು ನಾಯಕರು ಹೇಳಿಕೆ ನೀಡಿದ್ದರು. ಯಡಿಯೂರಪ್ಪ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರು ಮುಖ್ಯಮಂತ್ರಿ ಬದಲಿಸದಂತೆ ಪತ್ರ ಅಭಿಯಾನ ನಡೆಸಿದ್ದರು. 65 ಶಾಸಕರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ ಎಂದವರು ತಿಳಿಸಿದ್ದರು.

ಈ ನಡುವೆ, ಕಂದಾಯ ಸಚಿವ ಆರ್. ಅಶೋಕ್ ಅವರು ಹೇಳಿಕೆ ನೀಡಿದ್ದು, ನಾಯಕತ್ವ ಬದಲಾವಣೆ ಮತ್ತು ಅಸಮಾಧಾನಗಳ ಕುರಿತು ಬಹಿರಂಗ ಹೇಳಿಕೆ ನೀಡುವುದನ್ನು ತಡೆಯಲು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಸಮಿತಿಯೊಂದನ್ನು ರಚಿಸಿದ್ದಾರೆ ಎಂದಿದ್ದಾರೆ.

ಯಾವುದೇ ರೀತಿ ಸಹಿ ಅಭಿಯಾನ ನಡೆಸದಂತೆ ರಾಜ್ಯಾಧ್ಯಕ್ಷರು ಆದೇಶ ಹೊರಡಿಸಿದ್ದಾರೆ. ಇಂತಹ ಚಟುವಟಿಕೆ ನಡೆಸುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಸಿದ್ದಾರೆ ಎಂದು ಅಶೋಕ ಹೇಳಿದ್ದಾರೆ.

ಈ ಸಮಿತಿಯಲ್ಲಿ ಅಧ್ಯಕ್ಷ ಕಟೀಲ್, ಮುಖ್ಯಮಂತ್ರಿ ಯಡಿಯೂರಪ್ಪ, ನಾಲ್ವರು ಪ್ರಧಾನ ಕಾರ್ಯದರ್ಶಿಗಳು ಹಾಗೂ ನಾಲ್ವರು ಸಚಿವರಿದ್ದಾರೆ. ಅಶೋಕ ಸಹ ಸಮಿತಿಯ (2ನೇ ಪುಟಕ್ಕೆ)

## ಸಿಎಂ ಪರ ಶಾಸಕರ ಸಹಿ ಸಂಗ್ರಹ ; 65 ಶಾಸಕರ ಸಹಿ ಇರುವ ಪತ್ರ ಇದೆ



ಬೆಂಗಳೂರು, ಜೂ. 7 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ವರಿಷ್ಠರು ತಿಳಿಸಿದರೆ ರಾಜೀನಾಮೆಗೆ ಸಿದ್ಧ ಎಂದ ಬೆನ್ನಲ್ಲೇ ಬೆಂಬಲಿಗ ಶಾಸಕರಿಂದ ಸಹಿ ಸಂಗ್ರಹಣೆ ಆರಂಭವಾಗಿದೆ.

ಯಡಿಯೂರಪ್ಪನವರನ್ನು ಭೇಟಿ ಮಾಡಿದ ಸಚಿವರಾದ ಭೈರತಿ ಬಸವರಾಜ್, ನಾರಾಯಣಗೌಡ, ಸೋಮಣ್ಣ, ಶ್ರೀರಾಮುಲು ಮತ್ತು ಶಾಸಕರಾದ ರೇಣುಕಾಚಾರ್ಯ, ಬೆಳ್ಳಿ ಪ್ರಕಾಶ್, ಎಸ್. ರಘು, ಮಾಜಿ ಶಾಸಕರಾದ ಸುರೇಶ್ ಗೌಡ ಸೇರಿದಂತೆ ಮತ್ತಿತರರು ಇಂತಹ ಹೇಳಿಕೆ ನೀಡಬೇಡಿ. ನಿಮ್ಮ ಬೆಂಬಲಕ್ಕೆ ನಾವು ನಿಲ್ಲುತ್ತೇವೆ ಎಂದು ಅಭಯ ನೀಡಿದ್ದಾರೆ.

ಈ ಮಧ್ಯೆ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಸಬೇಕೆಂದು ಅವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ಸಹಿ ಸಂಗ್ರಹ (2ನೇ ಪುಟಕ್ಕೆ)


## ಬಿಎಸ್‌ವೈ ರಾಜೀನಾಮೆ ನೀಡಿದರೆ ನಾವೆಲ್ಲರೂ ರಾಜೀನಾಮೆಗೆ ಸಿದ್ಧ



ದಾವಣಗೆರೆ, ಜೂ.7- ನಾನು ಕೂಡ ಸಿಎಂ ಆಪ್ತ ವಲಯದಲ್ಲಿ ಕಾಣಿಸಿಕೊಂಡ ಶಾಸಕ. ಸಿಎಂ ಯಡಿಯೂರಪ್ಪ ರಾಜೀನಾಮೆ ನೀಡಿದರೆ ನಾವು ಯಾವ ತ್ಯಾಗಕ್ಕೂ ಸಿದ್ಧ. ಅವರು ಏನು ನಿರ್ಧಾರ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾವೆಲ್ಲರೂ ಸಿದ್ದರಿದ್ದೇವೆ ಎಂದು ಜಗಳೂರು ಶಾಸಕ ಎಸ್.ವಿ. ರಾಮಚಂದ್ರಪ್ಪ ಸ್ಫೋಟಕ ಹೇಳಿಕೆಯನ್ನು ನೀಡಿದ್ದಾರೆ. ತಮ್ಮ ನಿವಾಸದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಇನ್ನು ಎರಡು ವರ್ಷ ಸಿಎಂ ಆಗಿ ಯಡಿಯೂರಪ್ಪ ಅವರೇ ಮುಂದುವರೆಯುತ್ತಾರೆ. ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆಯನ್ನು ನಡೆಸುತ್ತೇವೆ. ನಾನು ಕೂಡ ಇವತ್ತು ಬೆಂಗಳೂರಿಗೆ ಹೋಗಬೇಕಿತ್ತು. ಆದರೆ ಅನಾರೋಗ್ಯದ ಕಾರಣ ಹೋಗಿಲ್ಲ. ಯಾರೋ ಒಬ್ಬ ಸಿಎಂ ಬದಲಾವಣೆ ಮಾಡಬೇಕು ಎಂದು ಓಡಾಡ್ತಾ ಇದ್ದಾನೆ. ಯಾವನೋ ಒಬ್ಬ ಕೂಗಾಡಿದರೆ (2ನೇ ಪುಟಕ್ಕೆ)

# ಮಕ್ಕಳಿದ್ದರೆ ದೇಶ : ಸಂಸದ ಸಿದ್ದೇಶ್ವರ

## ಕೋವಿಡ್ ಮೂರನೇ ಅಲೆಯ ಬಗ್ಗೆ ಎಚ್ಚರವಾಗಿರೋಣ



ದಾವಣಗೆರೆ, ಜೂ. 7 - ಕೋವಿಡ್-19 ಮೂರನೇ ಅಲೆಯು ಬರುತ್ತಿರುವ ಹಿನ್ನೆಲೆಯಲ್ಲಿ ಈ ಸೋಂಕು ಹೆಚ್ಚಾಗಿ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಾಗಿರುವುದರಿಂದ ಮಕ್ಕಳ ಬಗೆಗೆ ಹೆಚ್ಚು ಕಾಳಜಿ ಮತ್ತು ಮುಂಜಾಗ್ರತೆ ವಹಿಸಬೇಕು. ಮಕ್ಕಳಿದ್ದರೆ ದೇಶ. ಹಾಗಾಗಿ ದೇಶದ ಭಾವಿ ಪ್ರಜೆಗಳನ್ನು ರಕ್ಷಿಸುವ ಕೆಲಸ ಮಾಡೋಣ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ಇಂದು ನಡೆದ ಕೋವಿಡ್-19 ಮೂರನೇ ಅಲೆಯಲ್ಲಿ ಮಕ್ಕಳ ಬಗೆಗೆ ಮುಂಜಾಗ್ರತೆ ಸಂಬಂಧ ನಡೆದ ಅಧಿಕಾರಿಗಳು ಹಾಗೂ ವೈದ್ಯರುಗಳ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳಿರುವ ಮನೆಗಳ ಪೋಷಕರುಗಳಿಗೆ ಲಸಿಕೆ ಹಾಕಿಸಿ ಮಕ್ಕಳನ್ನು ಕಾಪಾಡಬೇಕು. ಮಕ್ಕಳಲ್ಲಿ ಸೋಂಕು ಹರಡದಂತೆ ಮುಂಜಾಗ್ರತೆಯ ಕ್ರಮಗಳನ್ನು ಪೋಷಕರೇ ತೆಗೆದುಕೊಳ್ಳಬೇಕು. ಮಕ್ಕಳಲ್ಲಿ ಸೋಂಕು ಕಂಡ ಕೂಡಲೇ ಅವರಿಗೆ ಪ್ರಾಥಮಿಕ ಹಂತದಲ್ಲಿ ಪರೀಕ್ಷೆ ಮಾಡಿಸಿ ಚಿಕಿತ್ಸೆ ನೀಡಬೇಕು. 5 ವರ್ಷಕ್ಕಿಂತ ಕಡಿಮೆಯಿರುವ ವಯಸ್ಸಿನ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವುದರಿಂದ ಅವರಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅಪೌಷ್ಠಿಕತೆ, ಸಕ್ಕರೆ ಕಾಯಿಲೆ, ಅಸ್ತಮ, ಕಿಡ್ನಿ ಸಮಸ್ಯೆ, ಹೃದಯ ತೊಂದರೆ ಇರುವ ಮಕ್ಕಳನ್ನು ಪಟ್ಟಿ ಮಾಡಿ ಅವರಿಗೆ ಚಿಕಿತ್ಸೆ ನೀಡಿ ಈ ಮಕ್ಕಳ ಬಗೆಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಅಧಿಕಾರಿಗಳು ಮತ್ತು ಪೋಷಕರಿಗೆ ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಈಗಾಗಲೇ ಅಂಗನವಾಡಿ ಮುಖಾಂತರ ವಿವಿಧ ತೊಂದರೆಗಳಿರುವ ಮಕ್ಕಳ ಪಟ್ಟಿ ಮಾಡಲಾಗಿದೆ. ದಾನಿಗಳು ಮಕ್ಕಳಿಗೆ ಅಗತ್ಯವಾದ ವೆಂಟಿಲೇಟರ್‌ಗಳನ್ನು (ಪಿಐಸಿಯು) ದಾನ ಮಾಡಿದರೆ ಅನುಕೂಲವಾಗುತ್ತದೆ. ದಾವಣಗೆರೆ ಜಿಲ್ಲೆಯ ಸುತ್ತಮುತ್ತಲಿನ 4-5 ಜಿಲ್ಲೆಗಳ ಜನರು ಜಿಲ್ಲಾಸ್ಪತ್ರೆಗೆ ಬರುವುದರಿಂದ ಅವರುಗಳು ಕೂಡ ಮಕ್ಕಳ ವೆಂಟಿಲೇಟರ್‌ಗಳನ್ನು ದಾನಮಾಡಲಿ ಎಂದು ಮನವಿ ಮಾಡಿದರು.

ಈಗಾಗಲೇ 3 ನೇ ಅಲೆ ಎದುರಿಸಲು ಅಗತ್ಯವಾದ ಮಾನವ ಸಂಪನ್ಮೂಲಗಳನ್ನು ಸಿದ್ದಪಡಿಸಿಕೊಳ್ಳಲಾಗುತ್ತಿದೆ. ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯ ಸ್ಟಾಫ್ ನರ್ಸ್, ಮಕ್ಕಳ ತಜ್ಞರು, ಮೂಲಸೌಕರ್ಯ, ಅಗತ್ಯ ಔಷಧಿಗಳ ವ್ಯವಸ್ಥೆ ಮಾಡಲಾಗುತ್ತಿದ್ದು, ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ದುರ್ಬಲ ಮಕ್ಕಳ ಪಟ್ಟಿ ತಯಾರು ಮಾಡಿ ಇವರುಗಳಿಗೆ ಹೆಚ್ಚಿನ ಕಾಳಜಿ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಜಿ.ಪಂ ಸಿಇಒ ಡಾ.ವಿಜಯ ಮಹಾಂತೇಶ್ ದಾನಮ್ಮನವರ್ ಮಾತನಾಡಿ, ವಿವಿಧ (2ನೇ ಪುಟಕ್ಕೆ)

## ಕೊವ್ಯಾಕ್ಸಿನ್ ಪ್ರಯೋಗ : ಮಕ್ಕಳ ತಪಾಸಣೆ

ನವದೆಹಲಿ, ಜೂ. 7 – ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಕೊವ್ಯಾಕ್ಸಿನ್ ಲಸಿಕೆಯನ್ನು ಮಕ್ಕಳ ಮೇಲೆ ಪ್ರಯೋಗಕ್ಕೆ ಒಳಪಡಿಸಲು, ಮಕ್ಕಳ ತಪಾಸಣೆ ಎ.ಐ.ಐ.ಎಂ.ಎಸ್.ನಲ್ಲಿ ಆರಂಭವಾಗಿದೆ.


ಈ ಲಸಿಕೆ ಮಕ್ಕಳ ಬಳಕೆಗೆ ಯೋಗ್ಯವೇ ಎಂಬ ಬಗ್ಗೆ ಪಾಟ್ನಾದ ಎ.ಐ.ಐ.ಎಂ.ಎಸ್.ನಲ್ಲಿ ಈಗಾಗಲೇ ಪರೀಕ್ಷೆ ನಡೆಸಲಾಗುತ್ತಿದೆ.

525 ಆರೋಗ್ಯವಂತರ ಸ್ವಯಂ ಪ್ರೇರಿತ ಮಕ್ಕಳ ಮೇಲೆ ಪ್ರಯೋಗ ನಡೆಸಲು ಉದ್ದೇಶಿಸಲಾಗಿದೆ. 28 ದಿನಗಳ ಒಳಗೆ ಮಕ್ಕಳಿಗೆ ಎರಡು ಡೋಸ್ ಲಸಿಕೆ ನೀಡಲಾಗುವುದು.

ಮಕ್ಕಳ ಪರೀಕ್ಷಾ ವರದಿ ಬಂದ ನಂತರ ಅವರಿಗೆ ಲಸಿಕೆ ನೀಡಲಾಗುವುದು ಎಂದು ಎಐಐಎಂಎಸ್‌ನ ಸಮುದಾಯ ಚಿಕಿತ್ಸಾ ಕೇಂದ್ರದ ಪ್ರೊ. ಡಾ. ಸಂಜಯ್ ರಾಯ್ ಹೇಳಿದ್ದಾರೆ.

2ರಿಂದ 18 ವರ್ಷದ ಮಕ್ಕಳ ಮೇಲೆ 2/3ನೇ ಹಂತದ ಪರೀಕ್ಷೆ ನಡೆಸಲು ಔಷಧ ನಿಯಂತ್ರಕರು ಕಳೆದ ಮೇ 12ರಂದು ಅನುಮತಿ ನೀಡಿದ್ದರು.

# ಅರಣ್ಯ ಪ್ರದೇಶದಲ್ಲಿ 1000 ಮಳೆ ನೀರು ಗುಂಡಿಗಳ ನಿರ್ಮಾಣ



ಕೂಡ್ಲಿಗಿ, ಜೂ. 7 - ತಾಲ್ಲೂಕಿನ ಗುಡೇಕೋಟೆ ಕರಡಿಧಾಮ ಅರಣ್ಯ ಪ್ರದೇಶದಲ್ಲಿ ಅರಣ್ಯಾಧಿಕಾರಿಗಳ ನೇತೃತ್ವದಲ್ಲಿ ನೀರು ಹರಿಯುವ ಸ್ಥಳಗಳಲ್ಲಿ ಗುಂಡಿಗಳನ್ನು ನಿರ್ಮಿಸುವ ಮೂಲಕ ಉದ್ಯೋಗ ಖಾತ್ರಿ ಯೋಜನೆಯನ್ನು ಸದುಪಯೋಗಪಡಿಸಿಕೊಂಡಿದ್ದು, ವಿಶ್ವ ಪರಿಸರ ದಿನಾಚರಣೆಯ 3 ದಿನದ ಮುಂಚೆ ಉತ್ತಮ ಮಳೆಯಾಗಿದ್ದರಿಂದ ಈ ಗುಂಡಿಗಳು ತುಂಬಿಕೊಂಡು ಅರಣ್ಯ ಮತ್ತು ವನ್ಯಜೀವಿಗಳಿಗೆ ಆಸರೆಯಾಗಿವೆ.

ಗುಡೇಕೋಟೆ, ಅಪ್ಪೇನಹಳ್ಳಿ, ಸಿಡೇಗಲ್ಲು, ರಾಮದುರ್ಗ ಅರಣ್ಯಪ್ರದೇಶಗಳಲ್ಲಿ ಇಂತಹ ನೀರು ಸಂಗ್ರಹಿಸುವ ಟ್ರೆಂಚ್‌ಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ನಿರ್ಮಿಸಿದ್ದು, ಅರಣ್ಯದ ಗಿಡಮರಗಳಿಗೆ ಹಾಗೂ ವನ್ಯಜೀವಿಗಳಿಗೆ ಆ ಗುಂಡಿಗಳು ಆಸರೆಯಾಗುವುದಲ್ಲದೇ ಸ್ಥಳೀಯ ಕೂಲಿ ಕಾರ್ಮಿಕರಿಗೆ, ರೈತರಿಗೆ ಲಾಕ್‌ಡೌನ್ ಸಮಯದಲ್ಲಿ ಸಹಸ್ರಾರು ಮಾನವ ದಿನಗಳ ಕೂಲಿಯನ್ನು ಒದಗಿಸಿದಂತಾಗಿದೆ. ಮಳೆ ನೀರನ್ನು ಸಹ ಅಲ್ಲಲ್ಲೇ ಇಂಗಿಸಿದಂತಾಗುವುದಲ್ಲದೇ ಪ್ರಾಣಿ, ಪಕ್ಷಿಗಳಿಗೆ ಮಳೆಗಾಲದಲ್ಲಿ ಕುಡಿಯುವ ನೀರು ಎಲ್ಲಾ ಪ್ರದೇಶಗಳಲ್ಲಿ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ.

**ಸಾವಿರಕ್ಕೂ ಹೆಚ್ಚು ಗುಂಡಿಗಳು:** ಗುಡೇಕೋಟೆ ಕರಡಿಧಾಮ ಪ್ರದೇಶದಲ್ಲಿ 1,000 ಕ್ಕೂ ಹೆಚ್ಚು ಮಳೆ ನೀರು ಸಂಗ್ರಹಿಸುವ ಗುಂಡಿಗಳನ್ನು ನಿರ್ಮಿಸಲಾಗಿದ್ದು, ನೀರಿನ ಹರಿವಿನ ಪ್ರಮಾಣ ನೋಡಿ ಗುಂಡಿಗಳ ಅಳತೆಯನ್ನು ಮಾಡಲಾಗಿದೆ.

ನೀರು ಹೆಚ್ಚು ಹರಿಯುವ ಪ್ರದೇಶದಲ್ಲಿ 5 ಮೀಟರ್ ಉದ್ದ, 2 ರಿಂದ 3 ಮೀಟರ್ ಅಗಲ, 1 ಮೀಟರ್ ಆಳದ ಗುಂಡಿಗಳನ್ನು ತೆಗೆಯಲಾಗಿದೆ.

ನೀರು ಕಡಿಮೆ ಹರಿಯುವ ಪ್ರದೇಶದಲ್ಲಿ 3 ಮೀ. ಉದ್ದ, 1 ಮೀಟರ್ ಅಗಲ, 1 ಮೀಟರ್ ಆಳದ ಗುಂಡಿಗಳನ್ನು ತೆಗೆಸಲಾಗಿದೆ. ಈ ಎಲ್ಲಾ ಟ್ರೆಂಚ್‌ಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕಾರ್ಮಿಕರು ತೆಗೆದಿದ್ದು , 23,605 ಮಾನವ ದಿನಗಳನ್ನು ಬಳಸಿ ಕೊಂಡು ಖಾತ್ರಿ ಯೋಜನೆಯನ್ನು ಅರಣ್ಯಾಧಿಕಾರಿಗಳು ಸದುಪಯೋಗಪಡಿಸಿ ಕೊಂಡಿರುವುದು ಶ್ಲಾಘನೀಯ.

### ಅರಣ್ಯಾಧಿಕಾರಿಗಳ ವೃತ್ತಿ ಧರ್ಮಕ್ಕೆ ಪರಿಸರ ಪ್ರಿಯರ ಶ್ಲಾಘನೆ

**ಗುಡೇಕೋಟೆ ಅರಣ್ಯ ಪ್ರದೇಶದಲ್ಲಿ ಸಾವಿರಕ್ಕೂ ಹೆಚ್ಚು ಟ್ರೆಂಚ್‌ಗಳನ್ನು ನಿರ್ಮಿಸಿದ್ದು, ಗುಡೇಕೋಟೆ ಕರಡಿಧಾಮ ಪ್ರದೇಶ ವ್ಯಾಪ್ತಿಗೆ ಬರುವುದರಿಂದ ಕರಡಿಗಳು ಸೇರಿದಂತೆ ಇತರೆ ಕಾಡುಪ್ರಾಣಿಗಳಿಗೆ, ಗಿಡಮರಗಳಿಗೆ ಆಸರೆಯಾಗಿವೆ. ಭೂಮಿಯ ಮಣ್ಣಿನ ಸವಕಳಿಯನ್ನು ತಪ್ಪಿಸಿದಂತಾಗಿದೆ.**

- ಎ. ರೇಣುಕಾ,
ಅರಣ್ಯಾಧಿಕಾರಿ, ಗುಡೇಕೋಟೆ ವಲಯ

# ಖರೀದಿಗೆ ಮುಗಿಬಿದ್ದ ಜನತೆ

**(1ನೇ ಪುಟದಿಂದ)** ದ್ರಾವಣ ಕಂಡು ಬರಲಿಲ್ಲ.

ನಗರಾದ್ಯಂತ ವಾಹನಗಳ ಓಡಾಟ ಜೋರಾಗಿಯೇ ಇತ್ತು. ಕಾರುಗಳು ಸೇರಿದಂತೆ ಎಲ್ಲಾ ರೀತಿಯ ವಾಹನಗಳ ಸಂಚಾರ ಯಾವುದೇ ಅಡೆತಡೆ ಇಲ್ಲದೇ ಸಾಗಿತ್ತು. ಅಂತೆಯೇ ಅಗತ್ಯ ವಸ್ತುಗಳ ಖರೀದಿಗೆ ಜನರು ಕೆ.ಆರ್. ಮಾರುಕಟ್ಟೆಯಲ್ಲಿ ಮುಗಿಬಿದ್ದಿದ್ದರು. ಇದಲ್ಲದೇ ಜಿಲ್ಲಾಡಳಿತ ಜನಸಂದಣಿ ಇರುವ ಪ್ರದೇಶಗಳಲ್ಲಿ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಕಡ್ಡಾಯ ಮಾಡಿ ಸ್ಪಷ್ಟವಾಗಿ ಹೇಳಿಕೆ ನೀಡಿದ್ದರೂ ಸಹ ಜನರು ಮಾಸ್ಕ್ ಧರಿಸದೇ, ಸಾಮಾಜಿಕ ಅಂತರವಿಲ್ಲದೆ ವ್ಯಾಪಾರ ವಹಿವಾಟು ನಡೆಸಿದರು.

ಕೊರೊನಾ ಸೋಂಕಿನ ಕೊಂಡಿ ಕಳಚಲು ಲಾಕ್ ಡೌನ್ ಅಸ್ತ್ರವಾಗಿದ್ದು, ಕೊರೊನಾದಿಂದ ಪಾರಾಗಲು ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವಂತೆ ಎಷ್ಟೇ ಜಾಗೃತಿ ಮೂಡಿಸಿದರೂ, ಕೈ ಮುಗಿದು ಮನವಿ ಮಾಡಿದರೂ, ದಂಡ ವಿಧಿಸಿದರೂ ಸಹ ಜನರ ಮನಸ್ಸು ಇನ್ನೂ ಕರಗಿಲ್ಲ.

ಲಾಕ್‌ಡೌನ್ ಇದ್ದರೂ ಸಹ ಕೊರೊನಾ ಸೋಂಕಿತರ ಸಂಖ್ಯೆ ಮಾತ್ರ ದಿನೇ ದಿನೇ ಏರಿಳಿತವನ್ನು ಕಾಣುತ್ತಿದೆ. ಇದಕ್ಕೆಲ್ಲಾ ಮುಂಜಾಗ್ರತೆ ಪಾಲಿಸದಿರುವುದೇ ಕಾರಣ. ಅವಕಾಶದ ಸಮಯದಲ್ಲಿ ಪ್ರತಿಯೊಂದು ಅಗತ್ಯ ವಸ್ತುಗಳ ಅಂಗಡಿಗಳ ಮುಂದೆ ಜನಜಂಗುಳಿ, ಸಾಮಾಜಿಕ ಅಂತರ ಮರೆತು, ಮಾಸ್ಕ್ ಧರಿಸದೇ ಖರೀದಿಗೆ ಮುಗಿಬೀಳುವುದು ಸಾಮಾನ್ಯವಾಗಿದೆ. ಜನರ ಓಡಾಟ ತಪ್ಪಿಲ್ಲ. ಲಾಕ್‌ಡೌನ್ ಸಮಯದಲ್ಲೂ ಏನಾದರೂ ಕುಂಟು ನೆಪ ಹೇಳಿ ರಸ್ತೆಗಿಳಿಯಲಾಗುತ್ತಿದೆ. ಇದು ಅಪಾಯಕಾರಿ ಎಂಬುದನ್ನು ಅರಿತು ಸ್ವಯಂ ಪ್ರೇರಿತರಾಗಿ ಜಾಗೃತಗೊಳ್ಳಬೇಕಿದೆ.

# ಯಾರೂ ಹಸಿವಿನಿಂದ ನರಳಬಾರದು



ಜಗಳೂರು ಶಾಸಕ ಎಸ್‌ವಿಆರ್

ಜಗಳೂರು, ಜೂ.7- ಕೊರೊನಾ ಕಾರಣದಿಂದಾಗಿ ತಾಲ್ಲೂಕಿನಲ್ಲಿ ಯಾರೂ ಹಸಿವಿನಿಂದ ನರಳಬಾರದು ಎಂಬ ಉದ್ದೇಶದಿಂದ ಸ್ವಂತ ಹಣದಿಂದ ಫುಡ್‌ಕಿಟ್ ನೀಡಿದ್ದೇನೆ ಎಂದು ಶಾಸಕರು ಹಾಗೂ ಶ್ರೀ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ತಿಳಿಸಿದ್ದಾರೆ.

ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ 50 ವಿಕಲಚೇತನ ಕುಟುಂಬಗಳಿಗೆ ಫುಡ್‌ಕಿಟ್‌ಗಳನ್ನು ಅವರ ಸ್ವಂತ ಹಣದಿಂದ ವಿತರಿಸಿ ಅವರು ಮಾತನಾಡಿದರು. ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಅನಿವಾರ್ಯತೆ ಎದುರಾಗಿದೆ. ಈ ಸಂದರ್ಭದಲ್ಲಿ ಅವರ ಜೀವನ ತುಂಬಾ ಕಷ್ಟವಾಗಿದೆ. ಇದನ್ನು ಗಮನಿಸಿ ನನ್ನ ವೈಯಕ್ತಿಕ ಹಣದಿಂದ 50ಕ್ಕೂ ಹೆಚ್ಚು ಕುಟುಂಬಗಳಿಗೆ ಫುಡ್‌ಕಿಟ್ ವಿತರಣೆ ಮಾಡುತ್ತಿದ್ದೇನೆ ಎಂದು ಹೇಳಿದರು.

ತಹಶೀಲ್ದಾರ್ ಗಿರೀಶ್ ಬಾಬು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಉಪ ತಹಶೀಲ್ದಾರ್ ರಾಮಚಂದ್ರಪ್ಪ, ಗ್ರೇಡ್ 2 ತಹಶೀಲ್ದಾರ್ ಮಂಜಾನಂದ, ಕಂದಾಯ ನಿರೀಕ್ಷಕ, ಕುಬೇರ್ ನಾಯ್ಕ, ಪ.ಪಂ. ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಪ.ಪಂ. ಸದಸ್ಯ ಪಾಪಲಿಂಗಪ್ಪ ಇನ್ನಿತರರಿದ್ದರು.

# ಜೀವರಕ್ಷಕ ಗಿಡ-ಮರಗಳನ್ನು ಬೆಳೆಸಲು ಸಂಕಲ್ಪ ಮಾಡೋಣ

### ಶ್ರೀ ಕಾಗಿನೆಲೆ ಸ್ವಾಮೀಜಿ ಕರೆ



ಮಲೇಬೆನ್ನೂರು, ಜೂ.7- ಮನುಷ್ಯನ ಜೀವರಕ್ಷಕವಾಗಿರುವ ಗಿಡ-ಮರಗಳನ್ನು ಬೆಳೆಸಲು ಎಲ್ಲರೂ ಸಂಕಲ್ಪ ಮಾಡಬೇಕೆಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಕರೆ ನೀಡಿದರು.

ಬೆಳ್ಳೂಡಿ ಶಾಖಾಮಠದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದ ನೇತೃತ್ವ ವಹಿಸಿ ಶ್ರೀಗಳು ಮಾತನಾಡಿದರು.

ಮರಗಳು ಅಶುದ್ಧ ಗಾಳಿಯನ್ನು ಹೀರಿಕೊಂಡು ಶುದ್ಧವಾದ ಗಾಳಿಯ ರೂಪದಲ್ಲಿ ನಮಗೆ ಆಮ್ಲಜನಕವನ್ನು ನೀಡುತ್ತಿವೆ. ಇಂತಹ ಮರಗಳನ್ನು ಕಡಿದು ಪರಿಸರ ಹಾಳು ಮಾಡುವುದನ್ನು ನಿಲ್ಲಿಸಿ ಮನೆ, ಕಚೇರಿ, ಶಾಲಾ-ಕಾಲೇಜು, ಆಸ್ಪತ್ರೆಗಳ ಆವರಣದಲ್ಲಿ ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸಲು ಪ್ರತಿಯೊಬ್ಬರೂ ಮುಂದಾಗಬೇಕು.

ಹೆಮ್ಮಾರಿ ಕೊರೊನಾದಿಂದಾಗಿ ಎಷ್ಟೋ ಜನ ಆಮ್ಲಜನಕದ ಕೊರತೆಯಿಂದ ಜೀವವನ್ನೇ ಕಳೆದುಕೊಂಡಿದ್ದಾರೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹಕ್ಕಾಗಬೇಕೆಂದು ಸ್ವಾಮೀಜಿ ಹೇಳಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ಸಭೆ-ಸಮಾರಂಭಗಳಲ್ಲಿ ಸಾರ್ವಜನಿಕರಿಗೆ ಸಸಿ ವಿತರಣೆ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಪ್ರತಿಯೊಬ್ಬರೂ ಗಿಡ ಬೆಳೆಸಬೇಕೆಂಬ ಕಾನೂನನ್ನು ಜಾರಿಗೊಳಿಸಿದರೆ ಮಾತ್ರ ಉತ್ತಮ ಪರಿಸರ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ವಕೀಲರೂ ಆದ ಜಿಲ್ಲಾ ಕಾಂಗ್ರೆಸ್ ವಕ್ತಾರ ಆದ ಎಂ. ನಾಗೇಂದ್ರಪ್ಪ ಮಾತನಾಡಿ, ಪರಿಸರ ಚೆನ್ನಾಗಿದ್ದರೆ ಮಾತ್ರ ನಮ್ಮ ಜೀವನ ಉಲ್ಲಾಸದಿಂದ ಕೂಡಿರುತ್ತದೆ. ಇಲ್ಲದಿದ್ದರೆ ನರಕವಾಗುತ್ತದೆ ಎಂಬುದನ್ನು ಕೊರೊನಾ ಎಚ್ಚರಿಸಿದೆ ಎಂದರು.

ಈ ಸಂದರ್ಭದಲ್ಲಿ ಹರಿಹರ ಗ್ರಾಮಾಂತರ ಪಿಎಸ್‌ಐ ಡಿ. ರವಿಕುಮಾರ್ ಅವರನ್ನು ಅವರ ಹುಟ್ಟುಹಬ್ಬ ನಿಮಿತ್ತ ಶ್ರೀಗಳು ಸನ್ಮಾನಿಸಿ, ಆಶೀರ್ವದಿಸಿದರು.

ಬೆಳ್ಳೂಡಿ ಗ್ರಾ.ಪಂ. ಅಧ್ಯಕ್ಷೆ ಗಂಗಮ್ಮ ಬೀರಪ್ಪ, ಅರಣ್ಯ ಇಲಾಖೆಯ ಟಿ. ರಾಜಣ್ಣ, ಉಮರ್ ಬಾಷಾ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ಕಾರ್ಯದರ್ಶಿ ಕೆ.ಪಿ. ಗಂಗಾಧರ್, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಚೂರಿ ಜಗದೀಶ್, ಪಿ.ಎಸ್. ನಿಜಲಿಂಗಪ್ಪ, ಪ್ರಿನ್ಸಿಪಾಲ್ ಬೀರಪ್ಪ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಡೀಸೆಲ್ ಸಹ ಶತಕದತ್ತ

**(1ನೇ ಪುಟದಿಂದ)** ಡೀಸೆಲ್ ಬೆಲೆ ಲೀಟರ್‌ಗೆ 99.24 ರೂ.ಗಳ ಹಂತಕ್ಕೆ ಬಂದಿದೆ. ಜಿಲ್ಲೆಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 106.39 ರೂ.ಗಳಾಗಿದೆ. ಪಾಕಿಸ್ತಾನದ ಗಡಿ ಸಮೀಪದಲ್ಲಿರುವ ಈ ಜಿಲ್ಲೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ದೇಶದಲ್ಲೇ ಅತಿ ಹೆಚ್ಚಾಗಿದೆ.

ವಿಶ್ವದಾದ್ಯಂತ ಆರ್ಥಿಕ ಪರಿಸ್ಥಿತಿ ಚೇತರಿಕೆಯ ಆಶಾಭಾವನೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಹೆಚ್ಚಳವಾಗುತ್ತಿದೆ. ಕಚ್ಚಾ ತೈಲದ ಬೆಲೆ ಎರಡು ವರ್ಷಗಳಲ್ಲಿ ಮೊದಲ ಬಾರಿಗೆ ಬ್ಯಾರಲ್‌ಗೆ 72 ಡಾಲರ್‌ಗಳ ಹಂತಕ್ಕೆ ಬಂದಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
**ಸ್ಫೂರ್ತಿ ಸೇವಾ ಟ್ರಸ್ಟ್, ದಾವಣಗೆರೆ ಇವರ ಸೇವಾರ್ಥ**
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್ ಮಾರಾಟಕ್ಕೆ**
ನೇರವಾಗಿ ರಿಜಿಸ್ಟ್ರಾರ್ ಪಾರ್ಟಿಯಿಂದ ವ್ಯಾಪಾರ
ಶಾಮನೂರು ಡಾಲರ್ಸ್ ಕಾಲೋನಿ 40×58 ಉತ್ತರ
ಕಿರಣ್ ಬೂಸ್ನೂರ್
ಮೊ. : 97315-63409
(ಬಂಗ್ಲೆ ಮನೆ ಲೀಜ್ ಗೆ ಇದೆ )

**ಮನೆಗಳು ಮಾರಾಟಕ್ಕಿವೆ**
1) 40x60 North ಮೂರು ಬೆಡ್ ರೂಮ್ ಮನೆ ಕುವೆಂಪು ಬಡಾವಣೆಯಲ್ಲಿ.
2) 30x40 East
3) 30x50 North ಚಿಗಟೇರಿ ಲೇಔಟ್‌ನಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಅಡುಗೆ, ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಶುದ್ಧ ಸಸ್ಯಹಾರಿ ತಿಂಡಿ, ಊಟ ದೊರೆಯುತ್ತದೆ. ನಿಮ್ಮ ಮನೆಗೇ ತಲುಪಿಸಲಾಗುವುದು. ಕರೆ ಮಾಡಿ.
63635 43487

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ, ಬಂಟರ್ ಕಲ್ಯಾಣ ಮಂಟಪ ಸುತ್ತಮುತ್ತ 30x50 East, 30x50 West. 30x40 East. 45x58 South, 30x38 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ಮೊದಲನೆ ಮಹಡಿ, ಅಟ್ಯಾಚ್ಡ್ ಬಾತ್ ರೂಂ ನಿಜಲಿಂಗಪ್ಪ ಬಡಾವಣೆಯಲ್ಲಿ 2BHK ಮನೆ ಹಾಗೂ ಅಟ್ಯಾಚ್ಡ್ ಬಾತ್ ರೂಂ ಇರುವ ಸಿಂಗಲ್ ರೂಂ ಬಾಡಿಗೆಗೆ ಇದೆ.
99867 78748
ಸಸ್ಯಹಾರಿಗಳಿಗೆ ಮಾತ್ರ

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ವೃದ್ಧರನ್ನು ನೋಡಿಕೊಳ್ಳಲು ಹೋಂ ನರ್ಸಿಂಗ್ ಕೇರ್ ಪರಿಣಿತಿವುಳ್ಳ ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ :
9448110895

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು
ದಿ. 10.06.2020ರ ಗುರುವಾರ ಮತ್ತು 11.06.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292


# ಸಹಿ ಸಂಗ್ರಹಕ್ಕೆ ಮುಖ್ಯಮಂತ್ರಿ ಬಿಎಸ್‌ವೈ ಬ್ರೇಕ್

**(1ನೇ ಪುಟದಿಂದ)** ಭಾಗವಾಗಿದ್ದಾರೆ.

ಗೊಂದಲ ನಿವಾರಿಸಲು ಹಾಗೂ ಬಹಿರಂಗ ಹೇಳಿಕೆ ತಪ್ಪಿಸಲು ಮತ್ತು ದೂರುಗಳಿದ್ದರೆ ಸಂಪರ್ಕಿಸಲು ಸಮಿತಿ ರಚಿಸಲಾಗಿದೆ. ಮುಖ್ಯಮಂತ್ರಿ ಸ್ಥಾನದ ಪರವಾಗಿ ಇಲ್ಲವೇ ಬದಲಿಸುವ ಪರವಾಗಿ ಯಾರೂ ಹೇಳಿಕೆ ನೀಡಬಾರದು ಇದು ರಾಜ್ಯಾಧ್ಯಕ್ಷರ ಹಾಗೂ ಕೇಂದ್ರ ನಾಯಕತ್ವದ ನಿರ್ದೇಶನ ಎಂದವರು ಹೇಳಿದ್ದಾರೆ.

ಹೈಕಮಾಂಡ್ ತಮ್ಮಲ್ಲಿ ವಿಶ್ವಾಸ ಇಡುವವರೆಗೆ ಮುಖ್ಯಮಂತ್ರಿ ಸ್ಥಾನದಲ್ಲಿರುತ್ತೇನೆ. ಹೈಕಮಾಂಡ್ ತಿಳಿಸಿದರೆ ರಾಜೀನಾಮೆ ನೀಡುತ್ತೇನೆ ಎಂದು ಯಡಿಯೂರಪ್ಪ ಹೇಳಿದ್ದರು. ಅವರ ಹೇಳಿಕೆ ನಂತರ ರಾಜ್ಯ ರಾಜಕೀಯದಲ್ಲಿ ತೀವ್ರ ಸಂಚಲನ ಉಂಟಾಗಿತ್ತು.

ಯಡಿಯೂರಪ್ಪ ಬೆಂಬಲಿಸಿ ಹಲವಾರು ಸಚಿವರು ಹಾಗೂ ಶಾಸಕರು ಹೇಳಿಕೆ ನೀಡಿದ್ದಾರೆ. ಇತ್ತೀಚಿನ ಬೆಳವಣಿಗೆಗಳು ಹಾಗೂ ಕೆಲ ನಾಯಕರು ಬದಲಾವಣೆ ಕುರಿತು ಬಹಿರಂಗ ಹೇಳಿಕೆ ನೀಡಿರುವುದು ಮುಖ್ಯಮಂತ್ರಿ ಮನಸ್ಸಿಗೆ ನೋವಾಗಿದೆ ಎಂದು ಅವರಿಗೆ ನಿಕಟವರ್ತಿಗಳಾದ ಕೆಲ ಶಾಸಕರು ಹಾಗೂ ಸಚಿವರು ಹೇಳಿಕೆ ನೀಡಿದ್ದಾರೆ.

ಯಡಿಯೂರಪ್ಪ ಪರವಾದ ಪತ್ರಕ್ಕೆ 65 ಶಾಸಕರು ಸಹಿ ಹಾಕಿದ್ದಾರೆ ಎಂದು ರೇಣುಕಾಚಾರ್ಯ ಹೇಳಿಕೆ ನೀಡಿದ್ದರು. ಆದರೆ, ಪತ್ರದ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಇನ್ನೋರ್ವ ಬಿಜೆಪಿ ಶಾಸಕ ಅರವಿಂದ ಬೆಲ್ಲದ್, ಯಾರ ಪರವಾಗಿ ಇಲ್ಲವೇ ವಿರುದ್ಧವಾಗಿ ಪತ್ರದ ಅಭಿಯಾನ ನಡೆದಿಲ್ಲ ಎಂದಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆಯ ಅನುದಾನ ಬಿಡುಗಡೆಯಾಗಿ 65 ಶಾಸಕರು ವಿಧಾನಸಭಾ ಅಧಿವೇಶನ ನಡೆಯುವ ಸಂದರ್ಭದಲ್ಲಿ ಪತ್ರವೊಂದಕ್ಕೆ ಸಹಿ ಹಾಕಿದ್ದರು. ಆ ಪತ್ರವನ್ನೇ ಈಗ ಬಳಸುತ್ತಿದ್ದಾರೋ ಏನೋ ತಮಗೆ ತಿಳಿದಿಲ್ಲ ಎಂದು ಬೆಲ್ಲದ್ ಹೇಳಿದ್ದಾರೆ.

ಆದರೆ, ಈ ಹೇಳಿಕೆ ತಳ್ಳಿ ಹಾಕಿರುವ ರೇಣುಕಾಚಾರ್ಯ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರೆದ ಪತ್ರವನ್ನು ಸಂಬಂಧಿಸಿದವರಿಗೆ ಕಳಿಸಲಾಗಿದೆ. ಇದು ಬೇರೆ ಪತ್ರ. ಈ ಪತ್ರ ಯಾರದ್ದೋ ಬಲಪ್ರದರ್ಶನವಲ್ಲ ಎಂದಿದ್ದಾರೆ. ಬೆಲ್ಲದ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದೂ ರೇಣುಕಾಚಾರ್ಯ ಲೇವಡಿ ಮಾಡಿದ್ದಾರೆ.

### ಶಾಸಕರ ಸಹಿ ಇರುವ ಪತ್ರ ಇದೆ

**(1ನೇ ಪುಟದಿಂದ)** ಆರಂಭವಾಗುತ್ತಿದೆ.

ಏತನ್ಮಧ್ಯೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೇಣುಕಾಚಾರ್ಯ, ನಾನು ನನ್ನ ಆತ್ಮಸಾಕ್ಷಿಯಾಗಿ ಎದೆ ಮುಟ್ಟಿಕೊಂಡು ಹೇಳುತ್ತೇನೆ. ನನ್ನ ಬಳಿ ಸಹಿ ಸಂಗ್ರಹ ಮಾಡಿರುವ 65ಕ್ಕೂ ಹೆಚ್ಚು ಶಾಸಕರ ಪತ್ರ ಇದೆ ಎಂದು ಹೇಳಿದರು

ಯಡಿಯೂರಪ್ಪನವರನ್ನೇ ಸಿಎಂ ಸ್ಥಾನದಲ್ಲಿ ಮುಂದುವರೆಸುವ ಪತ್ರ ನನ್ನ ಬಳಿ ಇದೆ. ಅದನ್ನು ಕೊರೊನಾ ಮುಗಿದ ಕೂಡಲೇ ದೆಹಲಿಗೆ ಹೋಗಿ ಹೈಕಮಾಂಡ್‌ಗೆ ತಲುಪಿಸುತ್ತೇವೆ. ಪತ್ರದಲ್ಲಿ ಯಡಿಯೂರಪ್ಪ ವಿರುದ್ಧ ಮಾತನಾಡುತ್ತಿರುವವರ ವಿರುದ್ದವೂ ಕ್ರಮ ಆಗಬೇಕು ಎಂಬುದಿದೆ ಎಂದರು.

### ನಾವೆಲ್ಲರೂ ರಾಜೀನಾಮೆಗೆ ಸಿದ್ಧ

**(1ನೇ ಪುಟದಿಂದ)** ಯಾರು ಕೇಳ್ತಾರೆ. ಅವನನ್ನು ಬೆಳೆಸಿದ್ದೇ ಯಡಿಯೂರಪ್ಪ. ಈ ಮಟ್ಟಕ್ಕೆ ತಂದು ಸಚಿವನನ್ನಾಗಿ ಮಾಡಿದ್ದಾರೆ ಎಂದು ಸಚಿವ ಸಿ.ಪಿ.ಯೋಗೇಶ್ವರ್ ವಿರುದ್ಧ ಕಿಡಿಕಾರಿದರು.

ಅಲ್ಲದೆ ಎಲ್ಲಾ ಎಂಎಲ್‌ಎಗಳು ಯಡಿಯೂರಪ್ಪನವರ ಜೊತೆ ಇದ್ದಾರೆ. 65 ಶಾಸಕರು ಸಹಿ ಹಾಕಿದ ಗುಂಪಿನಲ್ಲಿ ನಾನು ಕೂಡ ಇದ್ದೇನೆ, 65 ಜನರು ಅಷ್ಟೇ ಅಲ್ಲ, ಎಲ್ಲಾ ಶಾಸಕರು ಕೂಡ ಯಡಿಯೂರಪ್ಪನವರ ಪರವಾಗಿ ಇದ್ದಾರೆ. ಕೆಲ ವಿದ್ಯಮಾನಗಳಿಂದ ಬೇಸತ್ತು ಸಿಎಂ ಈ ರೀತಿ ಹೇಳಿಕೆ ನೀಡಿರಬಹುದು ಅಷ್ಟೇ. ಅವರೇ ನಮ್ಮ ಮುಖ್ಯಮಂತ್ರಿಗಳು. ಅವರ ನೇತೃತ್ವದಲ್ಲಿ ನಾವು ಮುಂದಿನ ಚುನಾವಣೆಗೆ ಹೋಗುತ್ತೇವೆ ಎಂದು ಪ್ರತಿಕ್ರಿಯೆ ನೀಡಿದರು.

# ಸೆಂಚ್ಯುರಿ, ಬೆಲೆ ಏರಿಕೆಯ ಉರಿ

**(1ನೇ ಪುಟದಿಂದ)** ದಿನಬಳಕೆ ವಸ್ತುಗಳ ಖರೀದಿಗೂ ಜನ ಹಿಂದೆ ಮುಂದೆ ನೋಡುವಂತಾಗಿದೆ ಎಂದು ಆರ್.ಬಿ.ಐ. ವರದಿ ತಿಳಿಸಿದೆ.

ಹಣದುಬ್ಬರದ ಕಾರಣದಿಂದಾಗಿ ರಿಸರ್ವ್ ಬ್ಯಾಂಕ್ ಬಡ್ಡಿ ದರವನ್ನು ಕಡಿಮೆ ಮಾಡಿಲ್ಲ. ಇದರಿಂದಾಗಿ ಉತ್ಪಾದನಾ ವಲಯ ಸಾಲಕ್ಕೆ ಹೆಚ್ಚಿನ ಬಡ್ಡಿ ತೆರಬೇಕಿದೆ. ಉತ್ಪನ್ನಗಳಿಗೆ ಬೇಡಿಕೆಯೂ ಕಡಿಮೆಯಾಗಿರುವುದು, ಬಡ್ಡಿ ದರ ಹೆಚ್ಚಾಗಿರುವುದು ಮತ್ತು ಮುಂದಿನ ದಿನಗಳ ಅನಿಶ್ಚಿತತೆ ಉತ್ಪಾದನಾ ವಲಯವನ್ನು ಚಿಂತೆಗೆ ದೂಡಿದೆ. ಗ್ರಾಹಕರಿಂದ ಹಿಡಿದು ಉತ್ಪಾದಕರವರೆಗೆ ಸಂಕಷ್ಟ ಎದುರಿಸುತ್ತಿರುವ ದಿನಗಳಿಂದ ಆರ್ಥಿಕತೆ ಮಂದವಾಗಿದೆ. ಇದೆಲ್ಲದರ ನಡುವೆ ಜನರು, ಅಚ್ಛೇ ದಿನ್ ಬದಲು ಸಾಮಾನ್ಯ ದಿನ ಕಂಡರೂ ಸಾಕು ಎಂದು ಪರಿತಪಿಸುವಂತಾಗಿದೆ.

# ರಾಜ್ಯಗಳಿಗೆ ಲಸಿಕಾ ಕಷ್ಟ ಗೊತ್ತಾಗಿದೆ

**(1ನೇ ಪುಟದಿಂದ)** ರಾಜ್ಯಗಳಿಗೆ ಇಷ್ಟು ದೊಡ್ಡ ಕಾರ್ಯದ ಕಷ್ಟ ಗೊತ್ತಾಯಿತು. ಎರಡು ವಾರಗಳ ನಂತರ ರಾಜ್ಯಗಳು ಹಿಂದಿನ ವ್ಯವಸ್ಥೆಯೇ ಉತ್ತಮವಾಗಿತ್ತು ಎಂದು ಬಹಿರಂಗವಾಗಿ ಹೇಳಲು ಆರಂಭಿಸಿದವು. ಈ ಬೇಡಿಕೆಯ ಹಿನ್ನೆಲೆಯಲ್ಲಿ, ದೇಶದ ಜನರಿಗೆ ಕಷ್ಟವಾಗಬಾರದು ಎಂದು ಮೇ 1ಕ್ಕೆ ಮುಂಚೆ ಇದ್ದ ವ್ಯವಸ್ಥೆ ವಾಪಸ್ ತರಲಾಗುತ್ತಿದೆ ಎಂದು ಮೋದಿ ತಿಳಿಸಿದ್ದಾರೆ.

# ಪತ್ರಕರ್ತ ಹೆಚ್.ಎನ್.ಮುನೇಶ್ ನಿಧನ



ದಾವಣಗೆರೆ, ಜೂ.7- ನಗರದ 'ಈ ಸಂಜೆ' ವರದಿಗಾರ ಹಾಗೂ ಪತ್ರಿಕೆಯ ಪುಟ ವಿನ್ಯಾಸ ತಂತ್ರಜ್ಞ ಹೆಚ್.ಎನ್. ಮುನೇಶ್ (52) ಅವರು ನಿನ್ನೆ ರಾತ್ರಿ 11.45ಕ್ಕೆ ಮೃತಪಟ್ಟಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಸಿ.ಜಿ. ಆಸ್ಪತ್ರೆಗೆ ದಾಖಲಾಗಿದ್ದರು. ಪತ್ನಿ, ಪುತ್ರ ಹಾಗೂ ಓರ್ವ ಪುತ್ರಿ ಅಗಲಿದ್ದಾರೆ. ಅವರ ಹುಟ್ಟೂರು ಬಾಡಾ ಗ್ರಾಮದಲ್ಲಿ ಇಂದು ಅಂತ್ಯ ಕ್ರಿಯೆ ನಡೆಯಿತು. ಸಂಜೆವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಭಾರತಿ, ವಿಶ್ವವಾಣಿ ಪತ್ರಿಕೆಗಳಲ್ಲಿ ಮುನೇಶ್ ಕಾರ್ಯ ನಿರ್ವಹಿಸಿದ್ದರು. ಮುನೇಶ್ ನಿಧನಕ್ಕೆ ವರದಿಗಾರರ ಕೂಟ, ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

### 61 ದಿನಗಳಲ್ಲೇ ಕಡಿಮೆ ಕೊರೊನಾ ಸೋಂಕು

**(1ನೇ ಪುಟದಿಂದ)** ಸೋಂಕಿತರು ಕಂಡು ಬಂದಿದ್ದರು. ಕಳೆದ ಒಂದು ವಾರದಲ್ಲಿ ಪಾಸಿಟಿವ್ ಕಂಡು ಬರುವವರ ಪ್ರಮಾಣ ಶೇ.6.21ರಷ್ಟಿದೆ. ಸಕ್ರಿಯ ಸೋಂಕಿತರ ಸಂಖ್ಯೆ ದೇಶದಲ್ಲೀಗ 14 ಲಕ್ಷದಷ್ಟಿದೆ. ಕಳೆದ 25 ದಿನಗಳಿಂದ ಹೊಸ ಸೋಂಕಿತರಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿದೆ.


**ಹೊಂಬಾಳ್ ಇ-ಮಾರ್ಟ್**
ದಾವಣಗೆರೆಯ ಎಲ್ಲಾ ಭಾಗಗಳಲ್ಲಿ ಮಿನಿ ಇ- ಮಾರ್ಟನ್ನು ಪ್ರಾರಂಭಿಸಲು ಸಮಾನ ಮನಸ್ಕ ಹೂಡಿಕೆದಾರರು ಬೇಕಾಗಿದ್ದಾರೆ. ನಿರ್ದಿಷ್ಟ ಆದಾಯದ ಜೊತೆಗೆ ಭದ್ರತೆಯನ್ನು ಒದಗಿಸಲಾಗುವುದು.
ಫೋ. : 90089 85112

**ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.**
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
9986361250
9113285992

**ಮನೆಗಳು ಮಾರಾಟಕ್ಕಿವೆ**
ಜಯನಗರ ಹತ್ತಿರ ಹೈಟೆಕ್ ಬಡಾವಣೆಯಲ್ಲಿ 30x50 ಪಶ್ಚಿಮ 3 ಬೆಡ್‌ರೂಂ, ಚಿಕ್ಕಮ್ಮಣಿ ಅರಸ್ ಬಡಾವಣೆಯಲ್ಲಿ 20x30 ಮೇಲೆ ಕೆಳಗೆ ಮನೆಗಳು ಮಾರಾಟಕ್ಕಿವೆ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**PARCEL ONLY**
ಪಾರ್ಸೆಲ್ ಮಾತ್ರ
ಹೋಂ ಡಿಲೆವರಿ 30-00 ಎಕ್ಸ್‌ಟ್ರಾ
(2 ಕಿ.ಮೀ. ವ್ಯಾಪ್ತಿಯಲ್ಲಿ ಮಾತ್ರ, 2 ಕಿ.ಮೀ ಗಿಂತ ಹೆಚ್ಚಿದ್ದರೆ ಎಕ್ಸ್‌ಟ್ರಾ ಚಾರ್ಜ್)
Home Delivery 30-00 Extra
Mob: 82170 57810, 73378 18258

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**Car For Sale**
Maruti Suzuki 800 Car, 2004 Model single owner, silver Colour, Update Documents, Vehicle in very good Condition, 127000 Kms Driven. Price 110000/- Negotiable. Contact
M.Prakash, Davanagere
77607 33750

**ನಾಟಿ ಕೋಳಿ ಮೊಟ್ಟೆ ದೊರೆಯುತ್ತದೆ**
Original Nati Eggs
90666 37770
98456 18890

**ಗೋಡೌನ್ ಬೇಕಾಗಿದೆ**
ದಾವಣಗೆರೆ ನಗರದ ಕೆ.ಆರ್.ರಸ್ತೆ (ಶಾಂತಿ ಟಾಕೀಸ್ ರಸ್ತೆ) ಗೆ ಹೊಂದಿಕೊಂಡಂತೆ 4000 Sq.ft ಗೋಡೌನ್ ಜಾಗ ಬಾಡಿಗೆಗೆ ಬೇಕಾಗಿರುತ್ತದೆ. ಸಂಪರ್ಕಿಸಿ
7406396332
7406740635


# ಮಕ್ಕಳಿದ್ದರೆ ದೇಶ : ಮೂರನೇ ಅಲೆಗೆ ಎಚ್ಚರವಾಗಿರೋಣ



**(1ನೇ ಪುಟದಿಂದ)** ಖಾಯಿಲೆಗಳಿಂದ ಬಳಲುತ್ತಿರುವ ಮಕ್ಕಳನ್ನು ಸರ್ವೇ ಮಾಡಿದ ಪಟ್ಟಿ ನಮ್ಮಲ್ಲಿದ್ದರೆ ಅಂತಹವರುಗಳಿಗೆ ತ್ವರಿತವಾಗಿ ಚಿಕಿತ್ಸೆ ನೀಡಿ ಅವರ ಬಗೆಗೆ ಕಾಳಜಿ ವಹಿಸಬಹುದು.


ಮಕ್ಕಳಲ್ಲಿ ಸೋಂಕು ಕಾಣಿಸಿಕೊಂಡರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡುವ ಮುನ್ನವೇ ತಾಯಂದಿರಿಗೆ ತರಬೇತಿ ನೀಡಿದರೆ ತಾಯಯಂದಿರು ಮಗುವನ್ನು ಸೂಕ್ತ ರೀತಿಯಲ್ಲಿ ಆರೈಕೆ ಮಾಡಬಹುದು ಎಂದು ಸಲಹೆ ನೀಡಿದರು.

ಡಿಹೆಚ್‌ಒ ಡಾ. ನಾಗರಾಜ್ ಮಾತನಾಡಿ, ಮೂರನೇ ಅಲೆ ಹಿನ್ನೆಲೆಯಲ್ಲಿ ಪರಿಣಿತರು, ತಜ್ಞ ವೈದ್ಯರು, ಮಕ್ಕಳ ತಜ್ಞರು, ವಿವಿಧ ಕಾಲೇಜು, ಮೆಡಿಕಲ್‌ಗಳ ವೈದ್ಯಾಧಿಕಾರಿಗಳು ಸಭೆ ನಡೆಸುತ್ತಿದ್ದು, ಆರೋಗ್ಯ ಇಲಾಖೆಯಿಂದ ಎಲ್ಲಾ ರೀತಿಯ ತಯಾರಿಗಳನ್ನು ಮಾಡಿಕೊಳ್ಳಲಾಗುತ್ತಿದೆ. ಕಡಿಮೆ ಸೋಂಕಿರುವ ಮಕ್ಕಳನ್ನು ತಾಲ್ಲೂಕು ಮಟ್ಟದಲ್ಲಿಯೇ ಗುಣಪಡಿಸಲು ಸಾಧ್ಯವಿರುತ್ತದೆ.

ಗಂಭೀರ ವಾದ ಪ್ರಕರಣಗಳಾದರೆ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಕರೆತರಲು ಸೂಚಿಸಬಹುದಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ನೋಡೆಲ್ ಅಧಿಕಾರಿ ಪ್ರಮೋದ್ ನಾಯ್ಕ್, ವೈದ್ಯಾಧಿಕಾರಿಗಳಾದ ಡಾ. ಕಾಳಪ್ಪ, ಡಾ.ಪ್ರಸಾದ್, ಡಾ.ರಮೇಶ್, ಡಾ. ಮೋಹನ್ ಮರುಳಯ್ಯ, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಆರ್‌ಸಿಹೆಚ್ ಡಾ.ಮೀನಾಕ್ಷಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯ್‌ಕುಮಾರ್ ಹಾಗೂ ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.


**ಕೈಲಾಸ ಸಮಾರಾಧನೆ**



**ಶ್ರೀ ಗೌಡ್ರ ಶೇಖರಪ್ಪ ಆವರಗೆರೆ** ಇವರು ದಿನಾಂಕ 31.05.2021ರ ಸೋಮವಾರ ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 08.06.2021ರ ಮಂಗಳವಾರ ಬೆಳಿಗ್ಗೆ 10.30 ಕ್ಕೆ ಆವರಗೆರೆಯ ಮೃತರ ಸ್ವಗೃಹದಲ್ಲಿ ಏರ್ಪಡಿಸಿದ್ದೇವೆ. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಮಗ-ಸೊಸೆ : **ಶ್ರೀಮತಿ ರಾಧ ಮತ್ತು ಸುರೇಶ್ ಜಿ.ಎಸ್.**
ಮೊಮ್ಮಕ್ಕಳು : **ಪ್ರಶಾಂತ್‌ಗೌಡ ಜಿ.ಎಸ್. ಲಕ್ಷ್ಮಿ ಜಿ.ಎಸ್.** ಹಾಗೂ
**ಗೌಡ್ರು ವಂಶಸ್ಥರು, ಆವರಗೆರೆ ಮತ್ತು ಬಂಧು-ಮಿತ್ರರು.**

**ಪ್ರೇಮಾಬಾಯಿ ಕುಲುಮೀ ನಿಧನ**



ದಾವಣಗೆರೆ ಪಿ.ಬಿ. ರಸ್ತೆ ವಿನಾಯಕ ನಗರ ವಾಸಿ ದಿ.ಅಣ್ಣಪ್ಪ ಪವಾರ್ ಇವರ ಧರ್ಮಪತ್ನಿ ಪ್ರೇಮಾಬಾಯಿ ಕುಲುಮೀ (55) ಇವರು ದಿನಾಂಕ 7.06.2021 ರ ಸೋಮವಾರ ಸಂಜೆ 4.30ಕ್ಕೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.06.2021ರ ಸೋಮವಾರ ರಾತ್ರಿ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿತು.

**ಭಾವಪೂರ್ಣ ಶ್ರದ್ಧಾಂಜಲಿ**



ಜನನ : 5.6.1947, ಮರಣ 2.6.2021
ತ್ರಿಶೂಲ್ ಮತ್ತು ಪತಾಂಜಲಿ ಯೋಗ ಕೇಂದ್ರದ ಬಂಧುಗಳಾದ **ಶ್ರೀ ಟಿ.ಹೆಚ್. ಬಕ್ಕೇಶ್ ಹೊಸಮನಿ** ಅವರು ದಿ. : 2.6.2021 ರಂದು ನಿಧನರಾಗಿರುತ್ತಾರೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಕುಟುಂಬ ವರ್ಗದವರಿಗೆ ಅವರ ನೋವನ್ನು ಸಹಿಸುವ ಶಕ್ತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ.
**ಸರ್ವ ಯೋಗ ಬಂಧುಗಳು ತ್ರಿಶೂಲ್ ಪತಂಜಲಿ ಯೋಗ ಕೇಂದ್ರ, ದಾವಣಗೆರೆ ಹಾಗೂ ತಿಳುವಳ್ಳಿ ಫ್ಯಾಮಿಲಿ**


# ರಾಜ್ಯಗಳಿಗೆ ಮತ್ತೆ ಉಚಿತ ಲಸಿಕೆ

**(1ನೇ ಪುಟದಿಂದ)** ಪ್ರಯೋಗಕ್ಕೆ ಒಳಪಡಿಸಲಾಗುತ್ತಿದೆ ಎಂದಿದ್ದಾರೆ.

ಮೂಗಿನ ಮೂಲಕ ಸ್ಪ್ರೇ ಮಾಡಿ ನೀಡುವ ಲಸಿಕೆಯ ಸಂಶೋಧನೆ ನಡೆಯುತ್ತಿದೆ. ಇದು ಯಶಸ್ವಿಯಾದರೆ, ಭಾರತದ ಲಸಿಕಾ ಅಭಿಯಾನಕ್ಕೆ ಮಹತ್ವದ ಉತ್ತೇಜನ ಸಿಗಲಿದೆ ಎಂದವರು ಹೇಳಿದ್ದಾರೆ.

ಲಸಿಕೆ ವೈರಸ್ ವಿರುದ್ಧ ಗುರಾಣಿ ಎಂದಿರುವ ಮೋದಿ, ದೇಶದಲ್ಲಿ ನಡೆಸಿರುವ ಪ್ರಯತ್ನಗಳ ಕಾರಣದಿಂದಾಗಿ ಮುಂಬರುವ ದಿನಗಳಲ್ಲಿ ಲಸಿಕೆ ಲಭ್ಯತೆ ಗಣನೀಯವಾಗಿ ಹೆಚ್ಚಾಗಲಿದೆ ಎಂದಿದ್ದಾರೆ. ಭಾರತ ಅತಿ ಕಡಿಮೆ ಸಮಯದಲ್ಲಿ ಎರಡು ಲಸಿಕೆಗಳನ್ನು ಉತ್ಪಾದಿಸುತ್ತಿದೆ.

23 ಕೋಟಿಗೂ ಹೆಚ್ಚು ಜನರು ಈಗಾಗಲೇ ಲಸಿಕೆ ಪಡೆದಿದ್ದಾರೆ ಎಂದು ಮೋದಿ ಹೇಳಿದ್ದಾರೆ. ಕೊರೊನಾ ಮಹಾಮಾರಿ ಎದುರಿಸಲು ಸಮರೋಪಾದಿಯಲ್ಲಿ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಹಲವಾರು ಹಂತಗಳಲ್ಲಿ ಕೊರೊನಾ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಮತ್ತು ಅಗತ್ಯ ಔಷಧಿಗಳ ಉತ್ಪಾದನೆ ಹೆಚ್ಚಿಸಲಾಗುತ್ತಿದೆ ಎಂದವರು ತಿಳಿಸಿದ್ದಾರೆ.

# ಬಡವರು, ವಾರಿಯರ್ಸ್‌ಗಳಿಗೆ ಸರ್ಕಾರ ದಿನಸಿ ನೀಡಬೇಕು



**ಹರಪನಹಳ್ಳಿ**

ಹರಪನಹಳ್ಳಿ, ಜೂ.7- ದೇಶದಲ್ಲಿ ಶೇ. 30 ರಷ್ಟು ಬಡವರಿದ್ದು, ಅವರ ಆರೋಗ್ಯ ವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ತುರ್ತು ತಪಾಸಣೆ ಮತ್ತು ಚಿಕಿತ್ಸೆಗೆ ವಿಶೇಷ ಆದ್ಯತೆ ನೀಡಬೇಕು. ನಿತ್ಯ ದಿನಸಿ ವಸ್ತುಗಳನ್ನು ಸರ್ಕಾರ ನೀಡಬೇಕು ಎಂದು ಶ್ರೀ ಊರಮ್ಮ ದೇವಿ ಪೂಜಾರ್ ಫೌಂಡೇಶನ್ ಅಧ್ಯಕ್ಷ ಬಸವರಾಜ ಪೂಜಾರ್ ಹೇಳಿದರು.

ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳಿಗೆ, ಆಶಾ ಕಾರ್ಯಕರ್ತೆಯರಿಗೆ, ನರ್ಸ್‌ಗಳಿಗೆ, ನಿರ್ಗತಿಕರಿಗೆ ಮತ್ತು ಕಡು ಬಡವರಿಗೆ ಶ್ರೀ ಊರಮ್ಮ ದೇವಿ ಪೂಜಾರ್ ಫೌಂಡೇಶನ್‌ನಿಂದ ಆಹಾರ ಧಾನ್ಯಗಳ ಕಿಟ್, ಸ್ಯಾನಿಟೈಸರ್ ಹಾಗೂ ದಿನಸಿ ವಿತರಿಸಿ ಮಾತನಾಡಿದರು.

ಪುರಸಭೆ ಮಾಜಿ ಸದಸ್ಯ ಅರುಣ ಪೂಜಾರ್ ಮಾತನಾಡಿ, ಆರ್ಥಿಕವಾಗಿ ಸದೃಢರಿರುವ ದಾನಿಗಳು ಮುಂದೆ ಬಂದು ಹಸಿದವರಿಗೆ ಅನ್ನ ನೀಡಲು ಸಹಕಾರ ನೀಡಬೇಕು ಎಂದು ಕರೆ ನೀಡಿದರು. ಈ ವೇಳೆ ಪುರಸಭೆ ಸದಸ್ಯ ಜಾಕೀರ್ ಸರ್ಖಾವಾಸ್, ಫೌಂಡೇಶನ್ ಸದಸ್ಯರಾದ ಮಂಜುನಾಥ ಪೂಜಾರ್, ವಿನಯ ಪೂಜಾರ್ ಸೇರಿದಂತೆ ಇನ್ನಿತರರಿದ್ದರು.

# ಹರಿಹರದಲ್ಲಿ ಬಿಜೆಪಿ ರೈತ ಮೋರ್ಚಾದಿಂದ ಪರಿಸರ ದಿನಾಚರಣೆ



ಹರಿಹರ, ಜೂ.7- ಇಲ್ಲಿನ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಆವರಣದಲ್ಲಿ ತಾಲ್ಲೂಕು ಬಿಜೆಪಿ ರೈತ ಮೋರ್ಚಾದಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿಗಳನ್ನು ನೆಡಲಾಯಿತು. ಮಾಜಿ ಶಾಸಕ ಬಿ.ಪಿ. ಹರೀಶ್, ತಾಲ್ಲೂಕು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕೊಂಡಜ್ಜಿ ವೀರಣ್ಣ, ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ, ಮುಖಂಡರಾದ ಬೆಳ್ಳೂಡಿ ರಾಮಚಂದ್ರಪ್ಪ, ಗೀತಮ್ಮ, ಮೋರ್ಚಾದ ಕಾರ್ಯದರ್ಶಿ ಕಿರಣ್ ಮೂಲಿಮನಿ, ಹನಗವಾಡಿ ಮಂಜಣ್ಣ, ಹುಲ್ಮನಿ ಉಮೇಶ್, ನಾಗರಾಜ್ ಕೋಡಿಹಳ್ಳಿ, ಗೌಡಗೇರಿ ವಿಜಯಕುಮಾರ್, ವಸಂತ್, ಪ್ರಭು, ಹನುಮಂತಪ್ಪ, ಮಲ್ಲಿಕಾರ್ಜುನಪ್ಪ, ಕರಿಬಸಪ್ಪ ಇನ್ನಿತರರು ಹಾಜರಿದ್ದರು.

# ಖಾಸಗಿ ಶಾಲಾ ಶಿಕ್ಷಕರಿಗೆ ಹಾಲಮ್ಮ ಮಲ್ಲಿಕಾರ್ಜುನಪ್ಪ ಟ್ರಸ್ಟ್‌ನಿಂದ ಕಿಟ್



ದಾವಣಗೆರೆ, ಜೂ.7- ಕೋವಿಡ್ ಹಿನ್ನೆಲೆಯಲ್ಲಿ ಕೆಲಸ ಕಳೆದುಕೊಂಡಿರುವ ವಿವಿಧ ಖಾಸಗಿ ಶಾಲೆಗಳ ಶಿಕ್ಷಕರಿಗೆ ಶ್ರೀಮತಿ ಹಾಲಮ್ಮ ಶ್ರೀ ಜಿ. ಮಲ್ಲಿಕಾರ್ಜುನಪ್ಪ ಚಾರಿಟೇಬಲ್ ಟ್ರಸ್ಟ್ ವತಿಯಿಂದ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು.

ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪುತ್ರ ಜಿ.ಎಸ್. ಅನಿತ್‌ಕುಮಾರ್ ನೇತೃತ್ವದಲ್ಲಿ 'ಗುರು ವಂದನೆ' ಕಾರ್ಯಕ್ರಮದ ಜೊತೆಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಗಾಯಿತ್ರಿ ಸಿದ್ದೇಶ್ವರ, ಸಿ. ನನ್ನಯ್ಯ, ಆರ್.ಎಸ್.ಎಸ್ ಬೌದ್ಧಿಕ ಪ್ರಮುಖ್ ಸಿ.ಎನ್. ಪ್ರದೀಪ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಬಿ.ಜಿ.ಎನ್ ನಿಧನಕ್ಕೆ ಎಲ್.ಹೆಚ್. ಶೋಕ

ದಾವಣಗೆರೆ, ಜೂ.7- ವಾಗ್ಮಿ ಪ್ರೊ. ಬಿ.ಜಿ.ನಾಗರಾಜ್ ಅವರ ನಿಧನಕ್ಕೆ ಹಿರಿಯ ವಕೀಲ ಎಲ್.ಹೆಚ್.ಅರುಣ್‌ಕುಮಾರ್ ಶೋಕ ವ್ಯಕ್ತಪಡಿಸಿದ್ದಾರೆ.

## ಓದುಗರ ಪತ್ರ

### ಬ್ಯಾಂಕ್/ಎಂಟಿಎಂಗಳಲ್ಲಿ ಬಿಡಿ ನೋಟು ಸಿಗಲಿ

ಮಾನ್ಯರೇ,

ಕೊರೊನಾ ಸೋಂಕನ್ನು ತಡೆಯುವ ನಿಟ್ಟಿನಲ್ಲಿ ಜೂನ್ 5ರ ವರೆಗೆ ಬ್ಯಾಂಕಿನ ಸಮಯವನ್ನು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಬದಲಾವಣೆ ಮಾಡುವುದರಿಂದ (ತಿಂಗಳ ಮೊದಲ ವಾರದ ಜನದಟ್ಟನೆ ತಪ್ಪಿಸಲು) ಗ್ರಾಹಕರಿಗೆ ಅನುಕೂಲವಾಗುವುದು.

ಸಾಮಾನ್ಯವಾಗಿ ತಮ್ಮ ವೇತನ, ನಿವೃತ್ತಿ ವೇತನ ಇಲ್ಲವೇ ಠೇವಣಿಗಳ ಬಡ್ಡಿಯನ್ನು ಪಡೆದು ಆ ತಿಂಗಳ ಜೀವನಾವಶ್ಯಕ ವಸ್ತುಗಳನ್ನು ಖರೀದಿಸಲಾಗಲೀ, ಮನೆಯ ಅಂಗಳಕ್ಕೆ ಬರುವ ತರಕಾರಿ ಕೊಳ್ಳಲು ಚಿಲ್ಲರೆಯ ಅವಶ್ಯಕತೆ ಇದ್ದು, ಐದು ನೂರಾರು ರೂಪಾಯಿ ಮೌಲ್ಯದ ನೋಟುಗಳ ಬದಲಾಗಿ ನೂರಿನ್ನೂರು ಮೌಲ್ಯದ ನೋಟುಗಳನ್ನು ಬ್ಯಾಂಕಿನವರೂ ಗ್ರಾಹಕರಿಗೆ ವಿತರಿಸುವಂತಾದರೆ ಸೂಕ್ತ.

ಬ್ಯಾಂಕಿನ ಎಟಿಎಂಗಳಲ್ಲೂ ಐದು ನೂರಾರು ರೂಪಾಯಿ ಮೌಲ್ಯದ ನೋಟುಗಳೇ ಹೆಚ್ಚಾಗಿ ಬರುತ್ತಿವೆ. ಚಿಲ್ಲರೆ ನೋಟುಗಳಿಗೆಂದು ಬ್ಯಾಂಕಿಗೆ ಬರುವುದು, ಇಲ್ಲವೇ ಪೆಟ್ರೋಲ್ ಬಂಕಿಗೆ ಹೋಗುವುದನ್ನು ತಪ್ಪಿಸಬಹುದು. ಕೆಲವೊಮ್ಮೆ ಚಿಲ್ಲರೆ ನೋಟಿಗೆಂದು ಅಲ್ಲಿ,ಇಲ್ಲಿ ಹೋಗಿ ಕೊರೊನಾ ಸೋಂಕನ್ನು ಅಂಟಿಸಿಕೊಳ್ಳುವ ಬದಲು, ಬ್ಯಾಂಕಿನವರು ಸ್ವಲ್ಪಮಟ್ಟಿಗೆ ಬಿಡಿ ನೋಟುಗಳನ್ನು ನೀಡಿದರೆ ಸೋಂಕು ಹರಡುವುದು ತಡೆಯಲು ಸಾಧ್ಯ ಅಲ್ಲವೇ...!

**- ರಘುನಾಥರಾವ್ ತಾಪ್ಸೆ**, ದಾವಣಗೆರೆ.

### ಎಸ್ಸೆಸ್ಸೆಲ್ಸಿ ಪರೀಕ್ಷೆ : ಗಣಿತ ಸವಾಲು

ಮಾನ್ಯರೇ,

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಗಣಿತ ಶಿಕ್ಷಕರಾದ ನಾವು ಇದುವರೆಗೂ ಬಹು ಆಯ್ಕೆ ಪ್ರಶ್ನೆಗಳಿಗೆ ಹೆಚ್ಚಿನ ಒತ್ತು ಕೊಟ್ಟಿರಲಿಲ್ಲ. ಯಾಕೆಂದರೆ ಪ್ರಸಕ್ತ ಮಾದರಿ ಪ್ರಶ್ನೆಪತ್ರಿಕೆಯಲ್ಲಿ ಕೇವಲ 8 ಬಹು ಆಯ್ಕೆಯ ಪ್ರಶ್ನೆಗಳು ಇತ್ತು. ಆದರೆ, ಈಗ ಬದಲಾದ ಪ್ರಶ್ನೆಪತ್ರಿಕೆಯಲ್ಲಿ ಬಹು ಆಯ್ಕೆಯ ಪ್ರಶ್ನೆಗಳೇ ಇರುವುದರಿಂದ ವಿದ್ಯಾರ್ಥಿಗಳಿಗೆ ಉತ್ತರಿಸಲು ಕಷ್ಟವಾಗಬಹುದು. ದೀರ್ಘ ಉತ್ತರದ ಪ್ರಶ್ನೆಗಳಿಗೆ ಮಕ್ಕಳನ್ನು ಬಹಳವಾಗಿ ತಯಾರಿ ಮಾಡಿದ್ದೆವು. ಇದ್ದಕ್ಕಿದ್ದಂತೆ ಆದ ಬದಲಾವಣೆಗೆ ಹೊಂದಿಕೊಂಡು ಮತ್ತೆ ಮಕ್ಕಳನ್ನು ತಯಾರುಗೊಳಿಸಬೇಕು. ಅದೂ ಅವರೊಂದಿಗೆ ನೇರ ಸಂಪರ್ಕ ಇಲ್ಲದೇ ಇರುವ ಸವಾಲು ಮುಂದಿದೆ. ಎದೆಗುಂದದೆ ಸ್ವೀಕರಿಸಬೇಕು.

**- ಮಂಜುಳಾ ಪ್ರಸಾದ್**, ಕೆಪಿಎಸ್, ತ್ಯಾವಣಿಗೆ

# ಬೆಂಗಳೂರಿನಲ್ಲಿ ಕೊರೊನಾ 2 ಸಾವಿರಕ್ಕೂ ಕಡಿಮೆ

ಬೆಂಗಳೂರು, ಜೂ. 7 – ಬೆಂಗಳೂರು ನಗರದಲ್ಲಿ ಸೋಮವಾರ 2 ಸಾವಿರಕ್ಕೂ ಕಡಿಮೆ ಕೊರೊನಾ ಪ್ರಕರಣಗಳು ಕಂಡು ಬಂದಿವೆ. ರಾಜ್ಯದಲ್ಲಿ ಒಟ್ಟು 11,958 ಸೋಂಕಿತರು ಕಂಡು ಬಂದಿದ್ದು, 340 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇದೇ ದಿನ 27,299 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಒಂದರಲ್ಲೇ 11,488 ಜನರು ಗುಣಮುಖರಾಗಿದ್ದಾರೆ.

ಪಾಸಿಟಿವ್ ಪ್ರಕರಣಗಳು ಕಂಡು ಬರುವ ದರ ಶೇ.9.08 ಆಗಿದ್ದರೆ, ಸಾವಿನ ಪ್ರಮಾಣ ಶೇ.2.84 ಆಗಿದೆ.

# ಲಾಕ್‌ಡೌನ್‌ನಲ್ಲಿ ಶೈಕ್ಷಣಿಕ ಪ್ರಗತಿ ಕುಂಠಿತವಾಗದಂತೆ ಕ್ರಮ



**ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ರಾಮಚಂದ್ರ**

ಜಗಳೂರು, ಜೂ.7- ಕಳೆದ ಲಾಕ್‌ಡೌನ್ ಅವಧಿಯಿಂದ ಇಲ್ಲಿಯವರೆಗೆ ತಾಲ್ಲೂಕು ಶಿಕ್ಷಣ ಇಲಾಖೆ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶಾಲಾ ಮಕ್ಕಳಿಗೆ ಆಹಾರ ಧಾನ್ಯ ಮತ್ತು ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಹೊಸ ಪುಸ್ತಕ ಬರುವವರೆಗೆ ಹಳೇ ಪುಸ್ತಕ ವಿತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

2020-21 ಹಾಗೂ 2021-22 ನೇ ಸಾಲಿನಲ್ಲಿ ಹತ್ತನೇ ತರಗತಿಯ ಮಕ್ಕಳ ಕಲಿಕೆಗೆ ತೊಂದರೆಯಾಗದಂತೆ ವಿವಿಧ ಮೂಲಗಳಿಂದ ಆನ್‌ಲೈನ್, ದೂರವಾಣಿ ಕರೆ ಹಾಗೂ ಗೃಹಪಾಠ ಮಾಡುವುದರ ಮುಖಾಂತರ ನಿರಂತರ ಸಂಪರ್ಕದಲ್ಲಿದ್ದು, ಕಲಿಕೆ ಮುಂದುವರೆಸಲಾಗಿದೆ ಎಂದರು.

ಮಕ್ಕಳಿಗೆ ಜಿಲ್ಲಾ ಹಂತದ ಮೊದಲ ಗೃಹ ಆಧಾರಿತ ಪರೀಕ್ಷೆ ನಡೆಸಿ ಶೇ. 86 ಫಲಿತಾಂಶ ಪಡೆಯಲಾಗಿದೆ. ಎರಡನೇ ಹಂತದ ಗೃಹಾಧಾರಿತ ಪರೀಕ್ಷೆಗೆ ಕ್ರಮಕೈಗೊಳ್ಳಲಾಗಿದೆ. ತಾಲ್ಲೂಕಿನ ಎಲ್ಲಾ 232 ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 2,1289 ಮಕ್ಕಳಿಗೆ ಆಹಾರ ಧಾನ್ಯಗಳನ್ನು ಇಲ್ಲಿಯವರೆಗೆ ವಿತರಿಸಲಾಗಿದೆ. ಪಠ್ಯ ಪುಸ್ತಕಗಳ ಮರುಜೋಡಣೆ ಮೂಲಕ ಹೊಸ ಪಠ್ಯಪುಸ್ತಕ ಬರುವವರೆಗೆ ಹಳೆ ಪುಸ್ತಕಗಳನ್ನು ವಿತರಿಸಿ ಕಲಿಕೆಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ತಾಲ್ಲೂಕಿನಲ್ಲಿ ಕೋವಿಡ್-19 ಸೋಂಕಿಗೆ ತುತ್ತಾಗಿ ಎಂಟು ಜನ ಶಿಕ್ಷಕರು ಮೃತಪಟ್ಟಿರುವುದು ತುಂಬಾ ದುಃಖಕರ ಸಂಗತಿಯಾಗಿದೆ. ತಾಲ್ಲೂಕಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳ ಸಂಖ್ಯೆಯನ್ನು 14ಕ್ಕೆ ಏರಿಸಲಾಗಿದ್ದು, ಹನ್ನೆರಡು ವಿದ್ಯಾರ್ಥಿಗಳಿಗೆ ಒಂದು ಕೊಠಡಿಯಂತೆ ಪರೀಕ್ಷಾ ಕೇಂದ್ರ ರಚನೆ ಮಾಡಲಾಗಿದ್ದು, ಕೋವಿಡ್ ನಿಯಮ ಪಾಲಿಸಿ ಪರೀಕ್ಷೆ ನಡೆಸಲಾಗುತ್ತದೆ. ಎಲ್ಲಾ ಪೋಷಕರನ್ನು ಮೊಬೈಲ್ ಹಾಗೂ ಗೂಗಲ್ ಮೀಟ್ ಮೂಲಕ ಸಂಪರ್ಕಿಸಿ, ತಮ್ಮ ಮಕ್ಕಳನ್ನು ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ತಿಳಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜಪ್ಪ, ಬಿಆರ್‌ಸಿ ಗಿರೀಶ್. ಡಿಸಿಸಿ ಬ್ಯಾಂಕ್ ಅಧ್ಯಕ್ಷ ವೇಣುಗೋಪಾಲ್ ರೆಡ್ಡಿ, ತಾ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದೇಶ್, ಉಪಾಧ್ಯಕ್ಷ ಬಸವರಾಜಪ್ಪ ತಾ.ಪಂ. ಸದಸ್ಯರಾದ ಮರೇನಹಳ್ಳಿ ಬಸವರಾಜ್, ತಿಮ್ಮಾಭೋವಿ, ಕುಬೇಂದ್ರಪ್ಪ, ಬಸವರಾಜ್, ತಿಪ್ಪೇಸ್ವಾಮಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಉಲೇಯಪ್ಪ, ಕಾರ್ಯದರ್ಶಿ ಪ್ರಕಾಶ್ ಸೇರಿದಂತೆ ಶಿಕ್ಷಣ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

# ಶಾಮನೂರು ಕುಟುಂಬದಿಂದ ಲಸಿಕೆ



ದಾವಣಗೆರೆ, ಜೂ.7- ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಹಮ್ಮಿಕೊಂಡಿರುವ ಉಚಿತ ಲಸಿಕಾ ಶಿಬಿರ ಕಾರ್ಯಕ್ರಮವು ಇಂದು ಸಹ ಮುಂದುವರೆದಿದ್ದು ನಾಗರಿಕರು ಉಚಿತ ಲಸಿಕೆ ಪಡೆದರು.

ನಗರ ಪಾಲಿಕೆಯ 1, 5, 20 ಮತ್ತು 45ನೇ ವಾರ್ಡುಗಳ ವ್ಯಾಪ್ತಿಯ ಡಾ. ಬಾಬು ಜಗಜೀವನರಾಂ ಸಮುದಾಯ ಭವನ, ಹೊರಟ್ಟಿ ದುರ್ಗಾಂಬಿಕಾ ಭವನ ಮತ್ತು ಭಾರತ್ ಕಾಲೋನಿಯ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಲಸಿಕೆ ನೀಡಲಾಯಿತು.

ಸ್ವತಃ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಲಸಿಕೆ ನೀಡುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಲಸಿಕೆ ಪಡೆದ ನಾಗರಿಕರ ಯೋಗಕ್ಷೇಮವನ್ನು ವಿಚಾರಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ, ಪಾಲಿಕೆ ಸದಸ್ಯರುಗಳಾದ ನಾಗರಾಜ್, ಜಿ. ಡಿ.ಪ್ರಕಾಶ್, ಉದಯ್ ಕುಮಾರ್, ಸುಧಾ ಇಟ್ಟಿಗುಡಿ ಮಂಜುನಾಥ್, ಮೀನಾಕ್ಷಿ ಜಗದೀಶ್, ವಿನಾಯಕ ಪೈಲ್ವಾನ್, ಮುಖಂಡರುಗಳಾದ ಎಸ್. ಮಲ್ಲಿಕಾರ್ಜುನ್, ಬಿ.ಎಂ.ಈಶ್ವರ್, ಟಿ.ರಮೇಶ್, ಬಿ.ಎಂ.ರಾಮಸ್ವಾಮಿ, ಪ್ರವೀಣ್, ರಾಕೇಶ್, ವೆಂಕಟೇಶ ನಾಯ್ಕ, ಸೊಸೈಟಿ ವೆಂಕಟೇಶ್ ನಾಯ್ಕ, ಅಲೆಕ್ಸಾಂಡರ್ (ಜಾನ್), ಅನ್ನಪೂರ್ಣಮ್ಮ, ಹರೀಶ್ ಕೆ.ಎಲ್ ಬಸಾಪುರ, ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

## ರಾಸಾಯನಿಕ ಘಟಕದಲ್ಲಿ ಬೆಂಕಿ : 18 ಜನರ ಸಾವು

ಪುಣೆ, ಜೂ. 7 – ಇಲ್ಲಿನ ಕೈಗಾರಿಕಾ ವಲಯದಲ್ಲಿರುವ ರಾಸಾಯನಿಕ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡು ಕನಿಷ್ಠ 18 ಕಾರ್ಮಿಕರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಕೊವ್ಯಾಕ್ಸಿನ್‌ಗಿಂತ ಕೊವಿಶೀಲ್ಡ್‌ನಲ್ಲಿ ಹೆಚ್ಚು ಆಂಟಿಬಡಿ

**ಆರೋಗ್ಯ ಕಾರ್ಯಕರ್ತರ ಅಧ್ಯಯನ ವರದಿ**

ನವದೆಹಲಿ ಜೂ. 7 – ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಎರಡೂ ಉತ್ತಮ ರೋಗ ನಿರೋಧಕತೆ ತರುತ್ತವಾದರೂ, ಕೊವಿಶೀಲ್ಡ್ ಹೆಚ್ಚು ಆಂಟಿಬಡಿ ಉತ್ಪಾದಿಸುತ್ತದೆ ಎಂದು ದೇಶಾದ್ಯಂತ ಆರೋಗ್ಯ ಕಾರ್ಯಕರ್ತರಲ್ಲಿ ನಡೆಸಲಾದ ಅಧ್ಯಯನ ತಿಳಿಸಿದೆ.

ಮೆಡ್‌ಆರ್‌ಎಕ್ಸ್‌ಐವಿ ಈ ಅಧ್ಯಯನ ನಡೆಸಿದ್ದು, ಅಧ್ಯಯನ ಇನ್ನೂ ಪ್ರಕಟವಾಗಬೇಕಿದೆ. 13 ರಾಜ್ಯಗಳ 22 ನಗರಗಳ 305 ಪುರುಷ ಹಾಗೂ 210 ಮಹಿಳಾ ಆರೋಗ್ಯ ಕಾರ್ಯಕರ್ತರು ಅಧ್ಯಯನದಲ್ಲಿ ಭಾಗಿಯಾಗಿದ್ದರು. ಈ ಲಸಿಕೆಗಳನ್ನು ಪಡೆದ ನಂತರ ಎಷ್ಟರ ಮಟ್ಟಿಗಿನ ಗುಣಮಟ್ಟದ ಆಂಟಿಬಡಿಗಳು ಉತ್ಪಾದನೆಯಾಗಿವೆ ಎಂಬುದನ್ನು ರಕ್ತ ಮಾದರಿಯಿಂದ ಪರಿಶೀಲಿಸಲಾಗಿತ್ತು. ಎರಡು ಡೋಸ್ ನಂತರ ಎರಡೂ ಲಸಿಕೆಗಳು ಗುಣಮಟ್ಟದ ರೋಗ ನಿರೋಧಕತೆ ತಂದಿವೆ.

ಆದರೆ, ಕೊವ್ಯಾಕ್ಸಿನ್‌ಗೆ ಹೋಲಿಸಿದರೆ ಕೊವಿಶೀಲ್ಡ್‌ಗೆ ಹೆಚ್ಚಿನ ಪ್ರಮಾಣದ ಆಂಟಿಬಡಿಗಳು ಉತ್ಪಾದನೆಯಾಗಿವೆ ಎಂದು ಅಧ್ಯಯನದ ನೇತೃತ್ವ ವಹಿಸಿದ್ದ ಕೊಲ್ಕೊತಾದ ಜಿ.ಡಿ. ಹಾಸ್ಪಿಟಲ್ ಅಂಡ್ ಡಯಾಬಿಟಿಸ್ ಇನ್‌ಸ್ಟಿಟ್ಯೂಟ್‌ನ ಅವದೇಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಒಟ್ಟು 515 ಆರೋಗ್ಯ ಕಾರ್ಯಕರ್ತರ ಪೈಕಿ ಶೇ.95ರಷ್ಟು ಜನರಲ್ಲಿ ಆಂಟಿಬಡಿಗಳು ಕಂಡು ಬಂದಿವೆ. ಕೊವಿಶೀಲ್ಡ್ ಪಡೆದ ಶೇ.98.1 ಹಾಗೂ ಕೊವ್ಯಾಕ್ಸಿನ್ ಪಡೆದ ಶೇ.80ರಷ್ಟು ಜನರಲ್ಲಿ ಸೆರೋಪಾಸಿಟಿವಿಟಿ ಕಂಡು ಬಂದಿದೆ ಎಂದವರು ಹೇಳಿದ್ದಾರೆ ವ್ಯಕ್ತಿಗಳಲ್ಲಿ ಆಂಟಿಬಡಿ ಉತ್ಪಾದನೆಯಾಗುವುದನ್ನು ಸೆರೋಪಾಸಿ ಟಿವಿಟಿ ಎಂದು ಕರೆಯಲಾಗುತ್ತದೆ. ಕೊವಿಶೀಲ್ಡ್ ಪಡೆದವರಲ್ಲಿ ಆಂಟಿಬಡಿಯ ಪ್ರಮಾಣ 127 ಎಯು/ಎಂಎಲ್ ಆಗಿತ್ತು. ಕೊವ್ಯಾಕ್ಸಿನ್‌ನಲ್ಲಿ ಈ ಪ್ರಮಾಣ 53 ಎಯು/ಎಂಎಲ್ ಆಗಿದೆ ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ.

## ಕಂಪ್ಯೂಟರ್ ಸೆಂಟರ್‌ನಲ್ಲಿ ಬೆಂಕಿ ಅವಘಡ

ದಾವಣಗೆರೆ, ಜೂ.7- ವಿದ್ಯುತ್ ಅವಘಡದಿಂದ ಕಂಪ್ಯೂಟರ್ ಸೆಂಟರ್‌ನಲ್ಲಿ ಬೆಲೆ ಬಾಳುವ ವಸ್ತುಗಳು ಸಂಪೂರ್ಣ ಸುಟ್ಟು ಭಸ್ಮವಾಗಿರುವ ಘಟನೆ ನಗರದಲ್ಲಿ ಇಂದು ಸಂಜೆ ನಡೆದಿದೆ.

ಸಿದ್ದವೀರಪ್ಪ ಬಡಾವಣೆಯ ಬಿಐಇಟಿ ರಸ್ತೆಯಲ್ಲಿನ ಕಟ್ಟಡದಲ್ಲಿನ ಧನುಷ್ ಎಂ. ಅಂಬಲಿ ಎಂಬುವರಿಗೆ ಸೇರಿದ ಫ್ಯೂಚರ್ ಐಟಿ ಸಲ್ಯೂಷನ್ ಮಳಿಗೆಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಕಂಪ್ಯೂಟರ್‌ಗಳು, ಲಾಪ್‌ಟಾಪ್, ನೆಟ್‌ವರ್ಕ್ ವಸ್ತುಗಳು ಸೇರಿದಂತೆ ಅನೇಕ ಬೆಲೆ ಬಾಳುವ ಯಂತ್ರೋಪಕರಣಗಳು ಬೆಂಕಿಗಾಹುತಿಯಾಗಿವೆ.

ಘಟನಾ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಅಧಿಕಾರಿ ಬಸವಪ್ರಭು ಶರ್ಮಾ ಮತ್ತು ಸಿಬ್ಬಂದಿಗಳ ತಂಡವು, ಬೆಂಕಿ ನಂದಿಸಿ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎ. ಆರ್. ಉಜ್ಜಿನಪ್ಪ ಅವರಿಗೆ ಈ ಕಟ್ಟಡ ಸೇರಿದೆ.

## ರೋಗಿಗಳ ಸಹಾಯಕರಿಗೆ ವಸತಿ



**ಹರಿಹರ**

ಹರಿಹರ, ಜೂ.7- ನಗರದ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಸೇವಾ ಭಾರತಿ ಟ್ರಸ್ಟ್ ವತಿಯಿಂದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಹೊಸ ಕಟ್ಟಡದಲ್ಲಿ ಕೋವಿಡ್ ರೋಗಿಗಳ ಸಹಾಯಕರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಶಾಸಕ ರಾಮಪ್ಪ ಅವರು ಭಾರತಮಾತೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟನೆ ಮಾಡಿದರು.

ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ, ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಹನುಮಾನಾಯ್ಕ್, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಮಂಜುನಾಥ್ ಅಗಡಿ, ಸ್ವಯಂ ಸೇವಾ ಕಾರ್ಯಕರ್ತರಾದ ಚಂದನ್ ಮೂರ್ಕಲ್, ವೀರೇಶ್, ಶಿವಪ್ರಕಾಶ್ ಶಾಸ್ತ್ರಿ, ಹೊರಕೇರಿ ಇನ್ನಿತರರು ಉಪಸ್ಥಿತರಿದ್ದರು.

## ದಾವಣಗೆರೆ ಕ್ಲಬ್‌ನ ಸದಸ್ಯರಿಗೆ ಲಸಿಕೆ ನೀಡಲು ಜಿಲ್ಲಾಡಳಿತಕ್ಕೆ ಮನವಿ



ದಾವಣಗೆರೆ, ಜೂ.7 - ದಾವಣಗೆರೆ ಕ್ಲಬ್‌ನ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಕೋವಿಡ್ ಲಸಿಕೆ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಕ್ಲಬ್‌ನ ಆಡಳಿತ ಮಂಡಳಿ ಪರವಾಗಿ ಸಹ ಕಾರ್ಯದರ್ಶಿ ಎಸ್.ಜಿ. ಉಳುವಯ್ಯ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿ, ಲಿಖಿತ ಮನವಿ ಪತ್ರ ಸಲ್ಲಿಸಿದರು.

# ವಾರಿಯರ್ಸ್‌ಗಳಿಗೆ ಊಟ ವಿತರಣೆ



**ಮಲೇಬೆನ್ನೂರು**

ಮಲೇಬೆನ್ನೂರು, ಜೂ.7- ಪಟ್ಟಣದ ಕೊರೊನಾ ವಾರಿಯರ್‌ಗಳಿಗೆ ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಇಂದು ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಿದ್ದರು.

ಪುರಸಭೆ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ, ಪೌರ ಕಾರ್ಮಿಕರಿಗೆ, ನಾಡಕಚೇರಿಯ ಸಿಬ್ಬಂದಿಗಳಿಗೆ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯರು, ಸಿಬ್ಬಂದಿಗಳಿಗೆ, ಆಶಾ ಕಾರ್ಯಕರ್ತೆಯರಿಗೆ ಮತ್ತು ಪೊಲೀಸ್ ಠಾಣೆಯ ಸಿಬ್ಬಂದಿಗಳಿಗೆ ಮಂಜುನಾಥ್ ಊಟ ವಿತರಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ದಿನಕರ್, ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಪುರಸಭೆ ಅಧಿಕಾರಿಗಳಾದ ಉಮೇಶ್, ಪ್ರಭು, ಗುರುಪ್ರಸಾದ್, ನವೀನ್, ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ಸುಬ್ಬಿ ರಾಜಪ್ಪ, ಭೋವಿ ಕುಮಾರ್, ಕುಂಬಳೂರು ವಾಸು, ಪತ್ರಕರ್ತರಾದ ಜಿಗಳಿ ಪ್ರಕಾಶ್, ಸದಾನಂದ್, ವಾಸವಿ ರಮೇಶ್ ಇನ್ನಿತರರಿದ್ದರು.

**ಟೆಸ್ಟ್:** ಪುರಸಭೆಯ ಸಿಬ್ಬಂದಿಗಳಿಗೆ ಮತ್ತು ಪೌರ ಕಾರ್ಮಿಕರಿಗೆ ಇಂದು ಕೊರೊನಾ ಟೆಸ್ಟ್ ಮಾಡಲಾಯಿತು. ಅಪೂರ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಡಾ. ಅಪೂರ್ವ ಅವರು ಪೌರಕಾರ್ಮಿಕರ ಆರೋಗ್ಯ ತಪಾಸಣೆ ಮಾಡಿ, ಅಗತ್ಯ ಸಲಹೆ ನೀಡಿದರು.

**3 ಪಾಸಿಟಿವ್:** ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು 40 ಜನರಿಗೆ ಕೊರೊನಾ ಟೆಸ್ಟ್ ಮಾಡಿದ್ದು, ಮೂವರಿಗೆ ಪಾಸಿಟಿವ್ ಬಂದಿದೆ. 46 ಜನರಿಗೆ ಕೋವಿಶೀಲ್ಡ್ ಲಸಿಕೆ ಹಾಕಿದ್ದೇವೆ ಎಂದು ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ತಿಳಿಸಿದ್ದಾರೆ.

**ಸೋಂಕು ಇಳಿಕೆ:** ಹರಿಹರ ತಾ.ನಲ್ಲಿ ಕೊರೊನಾ ಸೋಂಕು ಇಳಿಮುಖ ಆಗುತ್ತಿದ್ದು, ಸೋಮವಾರದ ವರದಿ ಪ್ರಕಾರ 19 ಜನರಿಗೆ ಸೋಂಕು ದೃಢಪಟ್ಟಿದೆ.

## ಲಸಿಕೆ : ಗ್ರಾಪಂ. ಅಧ್ಯಕ್ಷ ಸೇರಿ 10 ಜನರ ಮೇಲೆ ದೂರು ದಾಖಲು

ಹೊನ್ನಾಳಿ, ಜೂ.7- ತಾಲ್ಲೂಕಿನ ಮಲೇಕುಂಬಳೂರು ಗ್ರಾಮದಲ್ಲಿ ಇದೇ ದಿನಾಂಕ 5ರಂದು ಕೋವಿಡ್ ಲಸಿಕೆ ಹಾಕಿಸುವ ವಿಷಯದಲ್ಲಿ ಎರಡು ಗುಂಪುಗಳ ನಡುವೆ ನಡೆದ ಗಲಾಟೆಯಿಂದಾಗಿ ಒಟ್ಟು ಎರಡು ಪ್ರಕರಣಗಳಿಂದ 10 ಜನರ ಮೇಲೆ ದೂರು ದಾಖಲಾಗಿರುವ ಘಟನೆ ನಡೆದಿದೆ.

ಮಲೇಕುಂಬಳೂರು ಗ್ರಾಮ ಪಂಚಾಯತಿಯಿಂದ ಸರ್ಕಾರಿ ಹಿರಿಯ ಪ್ರಾಥ ಮಿಕ ಶಾಲೆಯ ಬಳಿ ನಡೆಯುತ್ತಿದ್ದ ಸಾರ್ವಜನಿಕ ಲಸಿಕಾ ಕಾರ್ಯಕ್ರಮಕ್ಕೆ ಅಡ್ಡಿ ಪಡಿಸಲಾಗಿದೆ ಎಂದು ಆರೋಪಿಸಿ, ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರು ಹಾಗೂ ಮಲೇಕುಂಬಳೂರು ಗ್ರಾ.ಪಂ. ಅಧ್ಯಕ್ಷ ಎಸ್.ಹೆಚ್ ವಿಕಾಸ್ ಅವರು ಎನ್. ಯೋಗೇಶ್ವರ್ ಸೇರಿದಂತೆ ಅವರ ತಂದೆ, ತಾಯಿ, ಸಹೋದರಿ ಸೇರಿ ನಾಲ್ವರ ಮೇಲೆ ದೂರು ದಾಖಲಿಸಿದ್ದಾರೆ.

ತಾನು ಪತ್ರಿಕೆ ವಿತರಕನಾಗಿದ್ದು, ಲಸಿಕೆ ಹಾಕಿಲ್ಲವೆಂದು ಆರೋಪಿಸಿ ಯೋಗೇಶ್ವರ್ ಅವರು ಪಂಚಾಯಿತಿ ಅಧ್ಯಕ್ಷ ವಿಕಾಸ್ ಸೇರಿದಂತೆ ಅವರ ಕುಟುಂಬದ ಆರು ಜನರ ಮೇಲೆ ದೂರು ದಾಖಲಿಸಿದ್ದಾರೆ.

ಪಿಎಸ್‌ಐ ಬಸವರಾಜ್ ಬಿರಾದಾರ್ ಅವರು ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೊಕದ್ದಮೆ ದಾಖಲಿಸಿಕೊಂಡಿದ್ದಾರೆ.

## ನಗರದ ಹೋಟೆಲ್ ಕಾರ್ಮಿಕರಿಗೆ ಲಸಿಕೆ


ಜಿಲ್ಲಾ ಹೋಟೆಲ್ ಉದ್ದಿಮೆ ದಾರರ ಸಂಘ, ಜಿಲ್ಲಾ ಆರೋಗ್ಯ ಇಲಾಖೆ ಸಹಯೋಗದಲ್ಲಿ ಹೋಟೆಲ್ ಉದ್ದಿಮೆದಾರರು, ಹೋಟೆಲ್ ಕಾರ್ಮಿಕರಿಗೆ ಕೋವಿಡ್ 19 ಲಸಿಕೆ ನೀಡುವ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ಗಂಟೆಗೆ ಆನಂದ ರೆಸಿಡೆನ್ಸಿಯಲ್ಲಿ ನಡೆಯಲಿದೆ ಎಂದು ಕಾರ್ಯದರ್ಶಿ ಬಿ.ಕೆ. ಸುಬ್ರಹ್ಮಣ್ಯ ತಿಳಿಸಿದ್ದಾರೆ.

## ಆಮ್ಲಜನಕ ಘಟಕ ಸ್ಥಾಪನೆಗೆ ಜಿಲ್ಲಾ ಈಡಿಗ ಸಂಘದಿಂದ ದೇಣಿಗೆ



ದಾವಣಗೆರೆ, ಜೂ.7 - ಜಿಲ್ಲೆಯಲ್ಲಿ ನಿರ್ಮಿಸುತ್ತಿರುವ ಆಮ್ಲಜನಕ ಘಟಕಕ್ಕೆ ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆಯ ಮನವಿಯ ಮೇರೆಗೆ, ಜಿಲ್ಲಾ ಈಡಿಗ ಸಮಾಜದ ಸಂಘದಿಂದ 25,000 ರೂ. ದೇಣಿಗೆಯ ಚೆಕ್ಕನ್ನು ರೆಡ್ ಕ್ರಾಸ್ ಸಂಸ್ಥೆಗೆ ನೀಡಲಾಗಿದೆ. ನಗರದ ಈಡಿಗರ ಸಂಘದ ಕಛೇರಿಯಲ್ಲಿ ಇಂದು ನಡೆದ ಸರಳ ಕಾರ್ಯಕ್ರಮದಲ್ಲಿ ಜಿಲ್ಲಾ ಈಡಿಗ ಸಂಘದ ಅಧ್ಯಕ್ಷ ಹೆಚ್.ಶಂಕರ್ ಅವರು ರೆಡ್ ಕ್ರಾಸ್ ಕಾರ್ಯದರ್ಶಿ ಸಿಎ ಉಮೇಶ್ ಶೆಟ್ಟಿ ಅವರಿಗೆ ಚೆಕ್ ಅನ್ನು ಹಸ್ತಾಂತರಿಸಿದರು. ಕಾರ್ಯದರ್ಶಿ ಎ. ನಾಗರಾಜ್, ದೇವೇಂದ್ರಪ್ಪ, ಭರಮಪ್ಪ, ರವೀಂದ್ರಬಾಬು, ರಾಜಣ್ಣ, ರಾಮದಾಸ್, ಸುವರ್ಣ ಜಯಪ್ರಕಾಶ್, ಮಹಾಬಲ ಪೂಜಾರಿ, ರೆಡ್‌ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

## ದಲಿತ ಸಂಘರ್ಷ ಸಮಿತಿಯ ರವಿಗೆ ಸನ್ಮಾನ




ದಾವಣಗೆರೆ ಜೂ.7 - ನಗರದ ಎಸ್.ಎಸ್.ಎಂ. ನಗರದಲ್ಲಿ ನಡೆದ ಮುಸ್ಲಿಮ್ ಬಾಂಧವರ ಮದುವೆ ಸಮಾರಂಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿ. ಕೆ. ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕೆ. ಅಸ್ಲಾಂ, ಕೆ. ಹಸೇನ್, ಆಯಿಷಾ, ಶಫಿ ಅಹಮದ್, ಶಬ್ರಿನ್ ತಾಜ್, ಕೆ ಸಾಧಿಕ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಇಬ್ರಾಹಿಂ, ದಾದಾಪೀರ್ ಮತ್ತು ಇತರರು ಭಾಗವಹಿಸಿದರು


## ಅಪಾಯದಂಚಿನಲ್ಲಿರುವ ವಿದ್ಯುತ್ ಕಂಬ



ದಾವಣಗೆರೆ, ಜೂ.7 - ಮಹಾನಗರ ಪಾಲಿಕೆ ವ್ಯಾಪ್ತಿಯ 23ನೇ ವಾರ್ಡಿನಲ್ಲಿರುವ ಬಕ್ಕೇಶ್ವರ ಶಾಲೆ ಬಳಿಯ ಬನ್ನಿಮರದ ಎದುರುಗಡೆ ಇರುವ ವಿದ್ಯುತ್ ಕಂಬವು ವಾಲಿ ಕೊಂಡಿದ್ದು, ತಕ್ಷಣವೇ ಸಂಬಂಧಪಟ್ಟ ಜನಪ್ರತಿನಿಧಿಗಳು, ಪಾಲಿಕೆ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸ್ಥಳೀಯರು ವಿನಂತಿಸಿಕೊಂಡಿದ್ದಾರೆ.


ಶ್ರೀ ಸಿಗಂದೂರು ಚೌಡೇಶ್ವರಿ ಉಪಹಾರ ದರ್ಶಿನಿ
ಪಿ.ಬಿ. ರೋಡ್ ರೇಣುಕಾ ಮಂದಿರ ಪಕ್ಕ ತೆರೆದಿರುತ್ತದೆ.
ಪಾರ್ಸೆಲ್ ಮಾತ್ರ
90086 85946, 91640 99906

# ದೀಟೂರು ಏತ ನೀರಾವರಿ ಯೋಜನೆ ನ್ಯೂನತೆ ಸರಿಪಡಿಸಲು ಒತ್ತಾಯ



ದಾವಣಗೆರೆ, ಜೂ.7- ಜಗಳೂರು ವಿಧಾನಸಭಾ ಕ್ಷೇತ್ರದ 57 ಕೆರೆಗಳ ದೀಟೂರು ಏತ ನೀರಾವರಿ ಯೋಜನೆಯ ನ್ಯೂನತೆ ಸರಿಪಡಿಸಿ, ಗುಣಮಟ್ಟದ ಕಾಮ ಗಾರಿ ನಿರ್ವಹಿಸುವಂತೆ ಜಿ.ಪಂ. ಮಾಜಿ ಸದಸ್ಯರೂ, ಭದ್ರಾ ಮೇಲ್ದಂಡೆ ಯೋಜನೆ ತಜ್ಞರ ಸಮಿತಿ ಸದಸ್ಯ ಕೆ.ಬಿ. ಕಲ್ಲೇರುದ್ರೇಶಪ್ಪ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಗುಣಮಟ್ಟದ ಮತ್ತು ಕಂಪನಿ ಸಿದ್ದಪಡಿಸಿದ್ದ ಹೆಚ್.ಡಿ. ಪೈಪನ್ನೇ ಅಳವಡಿಸಿದರೆ ದೀರ್ಘಕಾಲ ಬಾಳಿಕೆ ಬರುತ್ತದೆ. ಈ ಬಗ್ಗೆ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಶಾಸಕ ಎಸ್.ವಿ. ರಾಮಚಂದ್ರ ಅವರ ಗಮನಕ್ಕೆ ತರಲಾಗಿದ್ದು, ಸಕಾರಾತ್ಮಕ ಸ್ಪಂದನ ದೊರೆತಿದೆ ಎಂದರು.

ಈಗಿರುವ ಗುತ್ತಿಗೆಯ 5 ವರ್ಷದ ನಿರ್ವ ಹಣೆಯ ಅವಧಿಯನ್ನು 10 ವರ್ಷಕ್ಕೆ ವಿಸ್ತರಿಸಿ ಕಾಮಗಾರಿ ಕಳಪೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಂಸದರು, ಶಾಸಕರು ಕೂಡ ಪರಿಶೀಲಿಸುವಂತೆ ಮನವಿ ಮಾಡಿದರು.

ಹರಿಹರ ತಾಲ್ಲೂಕು ದೀಟೂರು ಗ್ರಾಮದ ತುಂಗಭದ್ರಾ ನದಿಯ ದಡದಲ್ಲಿ ಜಾಕ್‌ವೆಲ್ ನಿರ್ಮಾಣ ಮಾಡಿದ್ದು, 2400 ಹೆಚ್.ಪಿ. ಸಾಮರ್ಥ್ಯದ 8 ಮೋಟರ್‌ಗಳನ್ನು ಅಳವಡಿಸಲಾಗಿದೆ. ಇದರಿಂದ 1.39 ಟಿಎಂಸಿ ನೀರನ್ನು 30 ಕಿ.ಮೀ. ದೂರದ ಅಣಜಿ ಸಮೀಪದ ಚಟ್ನಳ್ಳಿ ಗುಡ್ಡದವರೆಗೆ ವಿದ್ಯುತ್ ಮೂಲಕ ಎತ್ತಲಾಗುವುದು. ನಂತರ ನದಿಯಿಂದ ಚಟ್ನಳ್ಳಿ ಗುಡ್ಡದವರೆಗೆ 600 ಅಡಿ ಎತ್ತರದಲ್ಲಿ ಗುರುತ್ವಾಕರ್ಷಣೆ ಮೂಲಕ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ನೀರನ್ನು ಹರಿಸಲಾಗುವುದು ಎಂದು ಮಾಹಿತಿ ನೀಡಿದರು.

ಯುವ ಜನರಿಗೆ ಈ ಯೋಜನೆಯ ಬಗ್ಗೆ ಅರಿವು ಇಲ್ಲದಿದ್ದರೆ ಮುಂದಿನ ಪೀಳಿಗೆ ತೊಂದರೆ ಅನುಭವಿಸಬೇಕಾದೀತು ಎಂದು ಎಚ್ಚರಿಸಿದರು. ಸ್ಥಳದಲ್ಲಿಯೇ ತಯಾರಿಸುವ ಎಂ.ಎಸ್. ಪೈಪ್ ಬದಲು ಕಂಪನಿಯಿಂದ ತಯಾರಾಗಿರುವ ಗುಣ ಮಟ್ಟದ ಪೈಪ್‌ಗಳನ್ನು ಅಳವಡಿಸಲು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದೇವಿಕೆರೆ ಗ್ರಾ.ಪಂ. ಸದಸ್ಯ ಗುರುಸ್ವಾಮಿ, ಚಟ್ನಳ್ಳಿ ಜಂಭುಗೌಡ್ರು, ಪ್ರಭು ಅಣಜಿಗೆರೆ ಉಪಸ್ಥಿತರಿದ್ದರು.

## ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಣಮುಖ

ಬೆಂಗಳೂರು, ಜೂ.7- ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಣಮುಖರಾಗಿದ್ದು, ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

## ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ, ಕೃಷಿ ಸಚಿವ ಪಾಟೀಲ್





ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಮತ್ತು ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರುಗಳು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಏರ್ಪಾಡಾಗಿರುವ ಜಿಲ್ಲೆಯ ಕೃಷಿ ಇಲಾಖೆಗೆ ಸಂಬಂಧಿಸಿದ ಸಭೆಯಲ್ಲಿ ಸಚಿವರುಗಳು ಭಾಗವಹಿಸಲಿದ್ದಾರೆ.

ನಂತರ 11 ಗಂಟೆಗೆ ಜಿಲ್ಲೆಯಲ್ಲಿ ಕೋವಿಡ್-19 ವೈರಾಣು ನಿಯಂತ್ರಣ ಹಾಗೂ ಲಸಿಕೆ ನೀಡುವಿಕೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಸಚಿವದ್ವಯರು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 12.30 ಕ್ಕೆ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಲಿದ್ದಾರೆ.

ಭೈರತಿ ಬಸವರಾಜ್ ಅವರು ಮಧ್ಯಾಹ್ನ 2.15ಕ್ಕೆ ಜಗಳೂರಿಗೆ ತೆರಳಿ ಜಗಳೂರು ಕ್ಷೇತ್ರದ ಶಾಸಕರೊಂದಿಗೆ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಮಧ್ಯಾಹ್ನ 12 ಗಂಟೆಗೆ ಚಿತ್ರದುರ್ಗಕ್ಕೆ ಪ್ರಯಾಣ ಬೆಳೆಸುವರು.


**32ನೇ ವರ್ಷದ ಪುಣ್ಯಸ್ಮರಣೆ**




ದಿ|| ಶ್ರೀಯುತ ಡಿ. ದುಗ್ಗಪ್ಪನವರು

ನೀವು ನಮ್ಮನ್ನಗಲಿ ಇಂದಿಗೆ 32 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿಕೊಟ್ಟ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,

ಮಗ : ಶ್ರೀ ಡಿ.ಡಿ.ಬಸವರಾಜಪ್ಪ,
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳು, ದಾವಣಗೆರೆ.

|| ಶ್ರೀ ಆಂಜನೇಯ ಪ್ರಸನ್ನ ||

**ಕೈಲಾಸ ಶಿವಗಣರಾಧನೆ ಆಹ್ವಾನ ಪತ್ರಿಕೆ**



ಆನೆಕೊಂಡ ಗ್ರಾಮದ ವಾಸಿ ಅಜ್ಜಪ್ಪರ ಶ್ರೀಮತಿ ಸಾವಿತ್ರಮ್ಮ ಎ. ಭರಮನಗೌಡ್ರು ಮತ್ತು ಮಕ್ಕಳ, ಮೊಮ್ಮಕ್ಕಳು, ಅಳಿಯಂದಿರು ಮಾಡುವ ವಿಜ್ಞಾಪನೆಗಳು.
ದಿನಾಂಕ 22.05.2021ರ ಶನಿವಾರ ಬೆಳಗಿನ ಜಾವ 5 ಗಂಟೆಗೆ ನನ್ನ ಪತಿಯವರಾದ

ಶ್ರೀಯುತ ಎ. ಭರಮನಗೌಡ್ರು

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಶಿವಗಣಾರಾಧನೆ ಯನ್ನು

ದಿನಾಂಕ 8.06.2021ನೇ ಮಂಗಳವಾರ ಬೆಳಗ್ಗೆ 10 ಗಂಟೆಗೆ "ಶಿವಕುಮಾರ ಸ್ವಾಮಿ ಬಡಾವಣೆ 2ನೇ ಹಂತ ಶ್ರೀ ಸಂಜೀವಿನಿ ಆಂಜನೇಯ ದೇವಸ್ಥಾನದ ಹತ್ತಿರವಿರುವ ಮೃತರ ಸ್ವಗೃಹದಲ್ಲಿ" ನೆರವೇರಿಸಲು ನಿಶ್ಚಯಿಸಿರುತ್ತೇವೆ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಎ.ಬಿ. ಚನ್ನಬಸಪ್ಪ ಶ್ರೀಮತಿ ಸುಜಾತ ಮತ್ತು ಮಕ್ಕಳು
ಶ್ರೀಮತಿ ಎ.ಬಿ. ಶಕುಂತಲ ಶ್ರೀ ಹನುಮಂತಪ್ಪ ವಿ.ಹೆಚ್ & ಮಕ್ಕಳು
ಶ್ರೀಮತಿ ಸುಧಾ ಎ.ಬಿ. ಶ್ರೀ ನಾಗರಾಜ್ ಜಿ.ಹೆಚ್ ಮತ್ತು ಮಕ್ಕಳು
ಅಜ್ಜಪ್ಪರ ವಂಶಸ್ಥರು ಮತ್ತು ಆನೆಕೊಂಡ ಗ್ರಾಮದ ಬಂಧು-ಮಿತ್ರರು.

ಮೊ: 98442 28162

ಸನ್ಮಾನ್ಯ ಡಾ|| ಶಾಮನೂರು ಶಿವಶಂಕರಪ್ಪನವರು ಮತ್ತು
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಇವರ ನೇತೃತ್ವದಲ್ಲಿ





16, 35, ಮತ್ತು 36ನೇ ವಾರ್ಡ್‌ಗಳ ಸಮಸ್ತ ನಾಗರಿಕರಿಗೆ

**ಉಚಿತ ಕೊರೊನಾ ಲಸಿಕಾ ಶಿಬಿರ**

ದಿನಾಂಕ 08.06.2021ರ ಮಂಗಳವಾರ ಬೆಳಿಗ್ಗೆ 10 ರಿಂದ ಪ್ರಾರಂಭ

| | |
|---|---|
| 16ನೇ ವಾರ್ಡ್‌ನ ಲಸಿಕಾ ಶಿಬಿರದ ಸ್ಥಳ : | ಶ್ರೀ ಮುರುಘರಾಜೇಂದ್ರ ಶಾಲೆ, ವಿನೋಬನಗರ |
| 35ನೇ ವಾರ್ಡ್‌ನ ಲಸಿಕಾ ಶಿಬಿರದ ಸ್ಥಳ : | ಅಟ್ಲ್ ಶಾಲೆ ಆವರಣ, ಶಶಾಂಕ್ ಜಿಮ್ ಪಕ್ಕ, ನಿಟುವಳ್ಳಿ. |
| 36ನೇ ವಾರ್ಡ್‌ನ ಲಸಿಕಾ ಶಿಬಿರದ ಸ್ಥಳ : | ಪಾಲಿಕೆ ಸದಸ್ಯರಾದ ಶ್ರೀಮತಿ ನಾಗರತ್ನಮ್ಮ ಅವರ ಜನಸಂಪರ್ಕ ಕಚೇರಿ |

ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರು
ಇಂದು ಮಧ್ಯಾಹ್ನ 12 ಕ್ಕೆ 16ನೇ ವಾರ್ಡ್ ಲಸಿಕಾ ಶಿಬಿರ, ಮಧ್ಯಾಹ್ನ 12.30 ಕ್ಕೆ 35ನೇ ವಾರ್ಡ್ ಲಸಿಕಾ ಶಿಬಿರ ಮತ್ತು ಮಧ್ಯಾಹ್ನ 1 ಗಂಟೆಗೆ 36ನೇ ವಾರ್ಡ್‌ಗಳ ಲಸಿಕಾ ಶಿಬಿರ ಕೇಂದ್ರಗಳಿಗೆ ಭೇಟಿ ನೀಡುವರು.

ನುಡಿದಂತೆ ನಡೆದ ನಾಯಕರುಗಳಿಗೆ ದಾವಣಗೆರೆ ನಾಗರಿಕರ ಪರವಾಗಿ ಕೃತಜ್ಞತೆಗಳು.





ಎ. ನಾಗರಾಜ್
16ನೇ ವಾರ್ಡ್ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು, ಮಹಾನಗರ ಪಾಲಿಕೆ, ದಾವಣಗೆರೆ.

ಸವಿತಾ ಗಣೇಶ್ ಹುಲ್ಲುಮನೆ
ಸದಸ್ಯರು, ಮಹಾನಗರ ಪಾಲಿಕೆ, 35ನೇ ವಾರ್ಡ್, ದಾವಣಗೆರೆ.

ನಾಗರತ್ನಮ್ಮ
ಸದಸ್ಯರು, ಮಹಾನಗರ ಪಾಲಿಕೆ, 36ನೇ ವಾರ್ಡ್, ದಾವಣಗೆರೆ.

ಬನ್ನಿ, ಎಲ್ಲರೂ ಕೈ ಜೋಡಿಸೋಣ, ಕೊರೊನಾ ಎದುರು ಜಯ ಸಾಧಿಸೋಣ

**ಹೃದಯಪೂರ್ವಕ ಧನ್ಯವಾದಗಳು**



ದಾವಣಗೆರೆ ಜಿಲ್ಲೆಯಲ್ಲಿ ಪ್ರಥಮವಾಗಿ ಜಗಳೂರು ತಾಲ್ಲೂಕಿನಲ್ಲಿ ಕೊರೊನಾ ಸೋಂಕಿತರಿಗೆ
ಆಮ್ಲಜನಕ ತಯಾರಿಕ ಘಟಕವನ್ನು ತಾಲ್ಲೂಕು ಆರೋಗ್ಯ ಆಸ್ಪತ್ರೆಯಲ್ಲಿ ಸ್ಥಾಪಿಸಲು
ಆಕ್ಟ್ ಗ್ರ್ಯಾಂಟ್ಸ್ ಮತ್ತು ಶಕ್ತಿ ಕ್ಲೀನ್ ಮ್ಯಾಕ್ಸ್ ವಿಂಡ್ ಸೋಲಾರ್ ಕಂಪನಿಯಾದ
ನಮ್ಮನ್ನು ಸಂಪರ್ಕಿಸಿ, ನಮಗೆ ತಾಲ್ಲೂಕಿನ ಸೇವೆ ಮಾಡಲು ಅವಕಾಶ ಮಾಡಿಕೊಟ್ಟ
ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ನಿಗಮದ ಅಧ್ಯಕ್ಷರೂ ಆದ
ಶ್ರೀ ಎಸ್. ವಿ. ರಾಮಚಂದ್ರ ಅವರಿಗೆ ಅನಂತ ಅನಂತ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.



ಇಂತಿ : ಮಾನ್ಯ ಶ್ರೀ ಸುಭಾಷ್ ಬಾಬು ಎಂ.ಎಸ್. ಪ್ರಧಾನ ವ್ಯವಸ್ಥಾಪಕರು, ನವೀಕರಿಸಬಹುದಾದ ಶಕ್ತಿ ಕ್ಲೀನ್ ಮ್ಯಾಕ್ಸ್ ವಿಂಡ್ ಮತ್ತು ಸೋಲಾರ್


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte